ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಭಾರತ ತಂಡದ ಆರಂಭ ಆಟಗಾರ್ತಿ ಸ್ಮೃತಿ ಮಂದಾನ ಅವರು ಐಸಿಸಿ ಮಹಿಳಾ ಏಕದಿನ ಬ್ಯಾಟಿಂಗ್ ಕ್ರಮಾಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ.

04 ಮಾರ್ಚ್ 2026 ಬುಧವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 348 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಮೊಬೈಲ್, ಎಐ - ರಕ್ಷಣಾ ವ್ಯವಸ್ಥೆಗಳ ಬೆನ್ನೆಲುಬು » 2



900 ಕೋ.ರೂ.ವೆಚ್ಚದಲ್ಲಿ ಮೆಗಾ ಡೇರಿ » 3



ಖಮೇನಿ ಸಾವಿಗೆ ಸಂತಾಪ ಸೂಚಿಸದ ಮೋದಿ » 4

# ಯುದ್ಧ: ಭಾರತಕ್ಕೆ ಎದುರಾದ ಆರ್ಥಿಕ ಅಪಾಯ


## ಹಾರ್ಮುಜ್ ಜಲಸಂಧಿ ಬಂದ್ | ಕೇಂದ್ರದ ಹಸ್ತಕ್ಷೇಪ ಅತ್ಯಗತ್ಯ

• ಪ್ರಜೋದಯ ವರದಿ

**ನವದೆಹಲಿ:** ಆಪರೇಷನ್ ಎಪಿಕ್ ಪ್ಯೂರಿ ಹೆಸರಿನಲ್ಲಿ ಅಮೇರಿಕಾ ಹಾಗು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ವೈಮಾನಿಕ ದಾಳಿ ನಡೆಸುತ್ತಿರುವ ಹಿನ್ನಲೆಯಲ್ಲಿ ಭಾರತಕ್ಕೆ ಆರ್ಥಿಕ ಅಪಾಯ ಎದುರಾಗಿದೆ.

ಇರಾನ್‌ನ ಹಾರ್ಮುಜ್ ಜಲ ಸಂಧಿ ಬಂದ್ ಆಗಿರುವುದರಿಂದ ಭಾರತೀಯ ಸರಕು ಸಾಗಣೆ ವಲಯ ಸಂಕಷ್ಟಕ್ಕೆ ಸಿಲುಕಿದೆ. ಜಲಸಂಧಿಯಲ್ಲಿ 700 ತೈಲ ಹಡಗು ಸಿಲುಕಿವೆ. ಅದರಿಂದ ಇಂಧನ ಮಾರುಕಟ್ಟೆಯಲ್ಲಿ ತಲ್ಲಣ ಸೃಷ್ಟಿಯಾಗಿದೆ. ಹಾರ್ಮುಜ್ ಜಲಸಂಧಿಯನ್ನು ಬಂದ್ ಮಾಡಿ ಆ ಮೂಲಕ ಸಾಗುವ ಹಡಗುಗಳಿಗೆ ಬೆಂಕಿ ಹಚ್ಚುವ ಎಚ್ಚರಿಕೆಯನ್ನು ಇರಾನ್ ರೆವಲ್ಯೂಷನರಿ ಗಾರ್ಡ್ಸ್ ನೀಡಿದ್ದಾರೆ. ಈ ಹಿನ್ನಲೆಯಲ್ಲಿ ಭಾರತೀಯ ಹಡಗು ಮಾಲೀಕರು ಕೇಂದ್ರ ಸರ್ಕಾರದ ನೆರವು ಕೋರಿದ್ದಾರೆ.

ಭಾರತ ಸರ್ಕಾರಕ್ಕೆ ಇಂಡಿಯನ್ ನ್ಯಾಷನಲ್ ಶಿಪ್ ಓನರ್ಸ್ ಅಸೋಸಿಯೇಷನ್ ಪತ್ರ ಬರೆದಿದ್ದು, 27 ಭಾರತೀಯ ಧ್ವಜವುಳ್ಳ ಹಡಗುಗಳು ಆ ಪ್ರದೇಶದಲ್ಲಿ ಸಿಲುಕಿಕೊಂಡಿರುವ ಬಗ್ಗೆ ಮತ್ತು 10,000 ಕೋಟಿ ರೂ.ಗೂ ಅಧಿಕ ಮೌಲ್ಯದ ಸರಕು ಸಾಗಣೆ ಆಸ್ತಿಗೆ ಅಪಾಯ ಎದುರಾಗಿರುವ ಬಗ್ಗೆ ಉಲ್ಲೇಖಿಸಲಾಗಿದೆ.



ಕ್ಷಿಪಣಿ ದಾಳಿಯಿಂದ ಒಂದು ಟ್ಯಾಂಕರ್ ಕೂದಲೆಳೆ ಅಂತರದಲ್ಲಿ ತಪ್ಪಿಸಿಕೊಂಡಿದೆ. ದಾಳಿಗೆ ಒಳಗಾದ ಮತ್ತೊಂದು ಹಡಗಿನಲ್ಲಿ 15 ಭಾರತೀಯರಿದ್ದಾರೆಂಬ ಮಾಹಿತಿ ಲಭ್ಯವಾಗಿದೆ. ಹೀಗಾಗಿ ಇರಾನ್ ಮತ್ತು ಇಸ್ರೇಲ್ ನಡುವೆ ಮಾತುಕತೆ ನಡೆಸಿ ಆಪತ್ತಿಗೆ ಒಳಗಾಗಿರುವ ಭಾರತೀಯ ಹಡಗುಗಳಿಗೆ ಸುರಕ್ಷಿತ ಮಾರ್ಗ ಒದಗಿಸುವಂತೆ ಐಎನ್‌ಎಸ್‌ಎ ಕೇಂದ್ರ ಸರ್ಕಾರವನ್ನು ಕೋರಿದೆ.

**ಇಂಧನ ಸರಬರಾಜಿನ ಪ್ರಮುಖ ಮಾರ್ಗ**

ಹಾರ್ಮುಜ್ ಜಲಸಂಧಿ ಮೂಲಕ ಜಾಗತಿಕ ತೈಲ ಮತ್ತು ಅನಿಲ ರಫ್ತಿನ ಶೇ. 20 ರಷ್ಟು ಸಾಗುತ್ತದೆ. ಭಾರತಕ್ಕೆ ಆಮದಾಗುವ ಕಚ್ಚಾ ತೈಲದ ಶೇ. 40 ಹಾಗು ಎಲ್‌ಎನ್‌ಜಿಯ ಶೇ. 50 ರಷ್ಟು ಇದೇ ಮಾರ್ಗದಿಂದಲೇ ಸಾಗಬೇಕು. ಅಮೇರಿಕಾ-ಇಸ್ರೇಲ್ ನಡೆಸಿದ ದಾಳಿಗಳ ಬಳಿಕ ಇರಾನ್ ಹಾರ್ಮುಜ್ ಜಲಸಂಧಿಯನ್ನ ಮುಚ್ಚಿರುವುದಾಗಿ ಘೋಷಿಸಿದೆ.

### 165 ಬಾಲಕಿಯರ ಅಂತ್ಯಕ್ರಿಯೆ

ಅಮೇರಿಕಾ-ಇಸ್ರೇಲ್ ನಡೆಸಿದ ದಾಳಿಯಲ್ಲಿ ಮೃತಪಟ್ಟಿದ್ದ ಇರಾನ್‌ನ 165 ಶಾಲಾ ಬಾಲಕಿಯರ ಅಂತ್ಯಕ್ರಿಯೆ ನೆರವೇರಿತು. ಪಾರ್ಥಿವ ಶರೀರದ ಅಂತ್ಯಕ್ರಿಯೆ ಮೆರವಣಿಗೆಗೆ ಜನಸಾಗರವೇ ಹರಿದುಬಂದಿತ್ತು. ಮುಗ್ಧ ಮಕ್ಕಳ ಮೇಲಿನ ದಾಳಿಗೆ ತೀವ್ರ ಆಕ್ರೋಶ ವ್ಯಕ್ತವಾಯಿತು.

ಅಮೇರಿಕಾ, ಇಸ್ರೇಲ್‌ನ ಮಿಲಿಟರಿ ದಾಳಿ ಬಗ್ಗೆ ಯುನೆಸ್ಕೋ ಕಳವಳ ವ್ಯಕ್ತಪಡಿಸಿದೆ. ಅಂತಾರಾಷ್ಟ್ರೀಯ ಮಾನವೀಯ ಕಾನೂನಿನ ಅಡಿಯಲ್ಲಿ ವಿದ್ಯಾರ್ಥಿಗಳನ್ನು ರಕ್ಷಿಸಬೇಕಾಗಿದೆ. ಈ ರೀತಿಯ ದಾಳಿಗಳು ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಅಪಾಯವನ್ನುಂಟುಮಾಡುತ್ತವೆ. ಶಿಕ್ಷಣದ ಹಕ್ಕನ್ನು ಹಾಳುಮಾಡುತ್ತವೆ ಎಂದು ಆತಂಕ ವ್ಯಕ್ತಪಡಿಸಿದೆ.

ಮೂಲಗಳ ಪ್ರಕಾರ ಇಂಧನದ ದೃಷ್ಟಿಯಿಂದ ಭಾರತ ಸದ್ಯಕ್ಕೆ ಸುಸ್ಥಿತಿಯಲ್ಲಿದೆ. ಕನಿಷ್ಟ 25 ದಿನಗಳಿಗೆ ಸಾಕಾಗುವಷ್ಟು ಕಚ್ಚಾ ತೈಲ ಮತ್ತು ಸಂಸ್ಕರಿತ ತೈಲ ಸಂಗ್ರಹ ದೇಶದಲ್ಲಿದೆ. ಆದರೆ, ಹಾರ್ಮುಜ್ ಕಣಿವೆ ಸ್ಥಗಿತಗೊಂಡಿರುವುದರಿಂದ ಭಾರತೀಯ ಸಾಗಣೆ ವಲಯಕ್ಕೆ ಭಾರೀ ಆರ್ಥಿಕ ಅಪಾಯ ಎದುರಾಗಿದ್ದು, ಕೇಂದ್ರ ಸರ್ಕಾರದ ತ್ವರಿತ ಹಸ್ತಕ್ಷೇಪ ಅತ್ಯಗತ್ಯವಾಗಿದೆ.

**ದಾಳಿ ಮುಂದುವರಿಸಿದ ಇಸ್ರೇಲ್**

ಇಸ್ರೇಲ್ ಸೇನೆಯು ಇರಾನ್ ಅಧ್ಯಕ್ಷರ ಕಚೇರಿ ಮತ್ತು ಟೆಹ್ರಾನ್‌ನಲ್ಲಿರುವ ರಾಷ್ಟ್ರೀಯ ಭದ್ರತಾ ಮಂಡಳಿ ಕಟ್ಟಡದ ಮೇಲೆ ವೈಮಾನಿಕ ದಾಳಿ ನಡೆಸಿದೆ. ಇಸ್ರೇಲಿ ವಾಯುಪಡೆ ಟೆಹ್ರಾನ್‌ನ ಹೃದಯ ಭಾಗದಲ್ಲಿರುವ ಇರಾನಿನ ಭಯೋತ್ಪಾದಕ ಆಡಳಿತದ ಸೌಲಭ್ಯಗಳನ್ನು ರಾತ್ರೋರಾತ್ರಿ ಹೊಡೆದುರುಳಿಸಿದೆ ಎಂದು ಸೇನೆ ತಿಳಿಸಿದೆ. ಮತ್ತೊಂದೆಡೆ ಇಸ್ರೇಲ್ ಪಡೆಗಳು ದಕ್ಷಿಣ ಲೆಬನಾನ್‌ನ ಗಡಿ ಪ್ರದೇಶಕ್ಕೆ ಧಾವಿಸಿದ್ದು ಯುದ್ಧದ ಗಂಭೀರತೆ ಹೆಚ್ಚಿದೆ.

**ತುಂಬಾ ತಡವಾಯಿತು ಎಂದ ಟ್ರಂಪ್**

ಇರಾನ್ ಜೊತೆ ಮಾತುಕತೆ ಪುನರಾರಂಭಿಸಲು ತುಂಬಾ ತಡವಾಯಿತು ಎಂದು ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮಂಗಳವಾರ ಹೇಳಿದ್ದಾರೆ.

ಇರಾನ್ ತನ್ನ ನಾಯಕತ್ವ ಕಳೆದುಕೊಂಡಿದ್ದು, ಅದರ ವಾಯುಪಡೆ, ನೌಕಾಪಡೆಗಳು ನಾಶವಾಗಿವೆ. ಅವರ ವಾಯುಪಡೆ, ನೌಕಾಪಡೆ ಮತ್ತು ನಾಯಕತ್ವ ಕಳೆದು ಹೋಗಿದೆ. ಅವರು ಮಾತನಾಡಲು ಬಯಸುತ್ತಾರೆಂದು ವ್ಯಂಗ್ಯವಾಡಿದ್ದಾರೆ.

ದಿ. ಆಯತೊಲ್ಲಾ ಸಯ್ಯದ್ ಅಲಿ ಖಮೇನಿ ಅವರ ಪ್ರತಿನಿಧಿ ಡಾ. ಅಬ್ದುಲ್ ಮಜೀದ್ ಹಕೀಮ್ ಇಲಾಹಿ ಅವರು ಇರಾನ್ ಮಾತುಕತೆಗೆ ಸಿದ್ಧವಾಗಿದೆ. ಆದರೆ ಘನತೆಯಿಂದ ಕೂಡಿರಬೇಕೆಂದು ಹೇಳಿದ್ದರು. ಅವರ ಈ ಹೇಳಿಕೆ ಬೆನ್ನಲ್ಲೇ ಟ್ರಂಪ್ ಪ್ರತಿಕ್ರಿಯಿಸಿದ್ದಾರೆ.

## ಯುದ್ಧ ಪೀಡಿತ ಪ್ರದೇಶದಲ್ಲಿ ಜಿಲ್ಲೆಯ 19 ಮಂದಿ : ಜಿಲ್ಲಾಧಿಕಾರಿ

• ಪ್ರಜೋದಯ ವರದಿ



**ಹಾಸನ:** ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದಿಂದ ಜಿಲ್ಲೆಯ 19 ಜನರನ್ನು ತವರಿಗೆ ವಾಪಾಸ್ ಬರಲು ಸಾಧ್ಯವಾಗದೆ ಅಲ್ಲಿಯೇ ಉಳಿದಿದ್ದಾರೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಾಹಿತಿ ನೀಡಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಬುದಾಬಿಯಲ್ಲಿ 1, ಬಹರೇನ್‌ನಲ್ಲಿ 10, ದುಬೈನಲ್ಲಿ 7 ಹಾಗು ಕುವೈತ್‌ನಲ್ಲಿ ಒಬ್ಬರು ಸಿಲುಕಿದ್ದಾರೆ. ಎಲ್ಲರೊಂದಿಗೆ ಜಿಲ್ಲಾಡಳಿತ ಸಂಪರ್ಕದಲ್ಲಿದ್ದು, ಅವರನ್ನು ಕರೆತರಲು ಪ್ರಯತ್ನ ಮಾಡಲಾಗುತ್ತಿದೆ. ಜಿಲ್ಲಾಡಳಿತ ತುರ್ತು ನೆರವು ಕಾರ್ಯಾಚರಣೆ ಕೇಂದ್ರಗಳನ್ನು ಸಕ್ರಿಯಗೊಳಿಸಿದೆ. ಜಿಲ್ಲೆಯವರ ಮಾಹಿತಿಯನ್ನು ರಾಜ್ಯ, ಕೇಂದ್ರ ಕಚೇರಿಗೆ ಸಲ್ಲಿಸಲಾಗಿದೆ. ಯುದ್ಧ ಪೀಡಿತ ದೇಶಗಳಲ್ಲಿ ಸಿಲುಕಿರುವ ಜಿಲ್ಲೆಯವರು ಯಾವುದೇ ಸಮಸ್ಯೆ ಇಲ್ಲವೆಂದು ತಿಳಿಸಿದ್ದಾರೆ. ನಾನು ಕೆಲವರೊಂದಿಗೆ ಮಾತನಾಡಿದ್ದೇನೆ. ಅವರು ಸುರಕ್ಷಿತವಾಗಿರುವುದನ್ನು ಖಚಿತಪಡಿಸಿದ್ದಾರೆಂದರು.

ಯುದ್ಧ ಪೀಡಿತ ಪ್ರದೇಶದಲ್ಲಿರುವವರ ಬಗ್ಗೆ ಕುಟುಂಬಸ್ಥರು ಆತಂಕ ಪಡುವ ಅಗತ್ಯವಿಲ್ಲ. ವಿಶೇಷವಾಗಿ ತಹಶೀಲ್ದಾರ್ ಹಾಗು ಹಿರಿಯ ಅಧಿಕಾರಿಗಳು ಅವರೊಂದಿಗೆ ನೇರ ಸಂಪರ್ಕದಲ್ಲಿದ್ದಾರೆ. ಯಾವುದೇ ತೊಂದರೆ ಹಾಗು ವಿಶೇಷ ನೆರವು ಅಗತ್ಯವಿದೆಯೇ ಎಂಬುದನ್ನು ವಿಚಾರಿಸಿದ್ದು, ಈವರೆಗೂ ಗಂಭೀರ ಸಮಸ್ಯೆ ಉದ್ಭವಿಸಿಲ್ಲವೆಂದರು.

ಸ್ವದೇಶಕ್ಕೆ ಬರಲು ಎಲ್ಲರೂ ಕಾಯುತ್ತಿದ್ದಾರೆ. ಅವರೊಂದಿಗೆ ಜಿಲ್ಲಾ ತುರ್ತು ನಿಗಾ ಕೇಂದ್ರವು ಸಂಪರ್ಕದಲ್ಲಿದೆ. ಎಲ್ಲೆಲ್ಲಿ ಸಿಲುಕಿದ್ದಾರೆ, ಯಾವ ಉದ್ದೇಶಕ್ಕಾಗಿ ಅಲ್ಲಿಗೆ ತೆರಳಿದ್ದರು, ಅವರ ಸ್ಥಿತಿ ಏನೆಂಬ ಮಾಹಿತಿ ಪಡೆಯುತ್ತಿದ್ದೇವೆ. ಜಿಲ್ಲಾಡಳಿತದಿಂದ ಅವರಿಗೆ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದರು.

## ಮಾ.7-8ರಂದು ನಗರದಲ್ಲಿ ಹಕ್ಕೊತ್ತಾಯ ಜಾಥಾ




• ಪ್ರಜೋದಯ ವರದಿ

**ಹಾಸನ:** ಅಂತರ್‌ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಸಮತೆಯೆಡೆಗೆ ನಮ್ಮ ನಡಿಗೆ-ಹಕ್ಕೊತ್ತಾಯ ಜಾಥಾವನ್ನು ನಗರದಲ್ಲಿ ಮಾ.7 ಮತ್ತು 8ರಂದು ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಜಿಲ್ಲಾ ಗೌರವಾಧ್ಯಕ್ಷೆ ಡಾ||ಎ.ಸಾವಿತ್ರಿ ಅವರು ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ಜಿಲ್ಲೆಯಲ್ಲೂ ಜಾಥಾ ನಡೆಯುತ್ತಿದ್ದು, ನಗರದಲ್ಲಿ 14ನೇ ಕಾರ್ಯಕ್ರಮವಾಗಿದೆ. ಸಮಾರಂಭ ಯಶಸ್ಸಿಗಾಗಿ ಸಿದ್ಧತೆ ಮಾಡಿಕೊಳ್ಳಲಾಗಿದೆ. ಮಾ.7ರಂದು ಬೆಳಿಗ್ಗೆ 9.30ಕ್ಕೆ ನಗರದ ಮಹಾರಾಜ ಉದ್ಯಾನವನದಲ್ಲಿ ಸಾಮಾಜಿಕ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಹಾಗು ಸಾಮಾಜಿಕ ಹಾಗು ಲೈಂಗಿಕ ಅಲ್ಪಸಂಖ್ಯಾತರ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಮಹಾರಾಜ ಪಾರ್ಕ್‌ನಿಂದ ಸಾಲಗಾಮೆ ರಸ್ತೆ, ಆರ್‌ಸಿ ರಸ್ತೆ, ಹಳೆಯ ಬಸ್ ನಿಲ್ದಾಣ, ಎನ್.ಆರ್.ವೃತ್ತ, ಸುಭಾಷ್ ಚೌಕ್, ಮಹಾವೀರ ವೃತ್ತದ ಮೂಲಕ ಹಾಸನಾಂಬ ಕಲಾಕ್ಷೇತ್ರ ತಲುಪಲಿದೆ ಎಂದರು.

ಬೆಳಿಗ್ಗೆ 11.30ಕ್ಕೆ ಹಾಸನಾಂಬ ಕಲಾಕ್ಷೇತ್ರದಲ್ಲಿ ಸಾರ್ವಜನಿಕ ಸಮಾವೇಶ ನಡೆಯಲಿದ್ದು, ಮಹಿಳಾ ಚೈತನ್ಯ ದಿನದ ಕುರಿತು ಮೈಸೂರಿನ ಡಾ. ಸುಕನ್ಯಾ ಕನಾರಹಳ್ಳಿ ಮಾತನಾಡುವರು. ತೀಸ್ತಾ ಸೆಟಲ್ವಾಡ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ವಿಬಿ-ಬಿ ರಾಮ್-ಜಿ ರದ್ದಾಗಲಿ, ಮನರೇಗಾ

» ನಾಲ್ಕನೇ ಪುಟದಲ್ಲಿ

# ಸರ್ಕಾರದ ವಿರುದ್ಧ ಬೀದಿಗಿಳಿಯಲು ಸಜ್ಜಾದ ಗುತ್ತಿಗೆದಾರರು

## ಜಿಲ್ಲೆಯಲ್ಲಿ 1200 ಕೋ.ರೂ. ಕಾಮಗಾರಿ ಬಿಲ್ ಬಾಕಿ | ಮಾ.6ರಂದು ಪ್ರತಿಭಟನೆಗೆ ನಿರ್ಧಾರ

• ಪ್ರಜೋದಯ ವರದಿ

**ಹಾಸನ :** ಕಾಮಗಾರಿಗಳ ಬಾಕಿ ಪಾವತಿ ಮಾಡದ ರಾಜ್ಯ ಸರ್ಕಾರದ ವಿರುದ್ಧ ತಿರುಗಿ ಬೀಳಲು ಗುತ್ತಿಗೆದಾರರು ಸಜ್ಜಾಗಿದ್ದಾರೆ. ಮಾ.6ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ದಾಖಲೆ ಬಜೆಟ್ ಮಂಡನೆಗೆ ಮುಂದಾಗಿರುವ ಹೊತ್ತಿನಲ್ಲೇ ಗುತ್ತಿಗೆದಾರರು ಕೂಡ ಬೀದಿಗಿಳಿದು ಹೋರಾಟ ಮಾಡಲು ತೀರ್ಮಾನಿಸಿದ್ದಾರೆ.

ರಾಜ್ಯಾದ್ಯಂತ ಒಟ್ಟು ಕಳೆದ ಮೂರು ವರ್ಷದ ಅವಧಿಯಲ್ಲಿ ಗುತ್ತಿಗೆದಾರರಿಗೆ ಒಟ್ಟು 37 ಸಾವಿರ ಕೋ.ರೂ. ರಾಜ್ಯ ಸರ್ಕಾರ ಬಾಕಿ ನೀಡಬೇಕಿದೆ. ಜಿಲ್ಲೆಯ ಗುತ್ತಿಗೆದಾರರ ಒಟ್ಟು 1,200 ಕೋ.ರೂ. ಕಾಮಗಾರಿಯ ಬಿಲ್ ಪಾವತಿಯಾಗಬೇಕಿದ್ದು, ಮಾ.6ರಂದು ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಮಂಜುನಾಥ್ ಅವರ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆಗೆ ನಿರ್ಧರಿಸಲಾಗಿದೆ. ಜಿಲ್ಲೆಯಿಂದಲೂ 500 ರಿಂದ 600 ಮಂದಿ ಗುತ್ತಿಗೆದಾರರು ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ.

**ನೀರಾವರಿ ಇಲಾಖೆಯಲ್ಲೇ ಹೆಚ್ಚು**

ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಒಟ್ಟು 292 ಕೋ.ರೂ. ಹಣ ಬರಬೇಕಿದೆ. ಅದೇ ರೀತಿ ನೀರಾವರಿ ಇಲಾಖೆಯಿಂದ ಕೈಗೊಂಡಿರುವ ಸೇತುವೆ, ಕಾಲುವೆ, ಚೆಕ್‌ಡ್ಯಾಂ, ನಾಲೆ ದುರಸ್ತಿ, ವಿದ್ಯುತ್ ಉಪಕರಣ, ಯಂತ್ರೋಪಕರಣ ಅಳವಡಿಕೆ ಸೇರಿ ಒಟ್ಟು 512 ಕೋ.ರೂ. ಮೊತ್ತದ ಬಿಲ್ ಬರಬೇಕಿದೆ. ಜಿಲ್ಲಾದ್ಯಂತ ಮನೆ ಮನೆಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸುವ ಜಲ ಜೀವನ್ ಮಿಷನ್ (ಜೆಜೆಎಂ) ಯೋಜನೆಯಡಿ ಕಾಮಗಾರಿ ನಡೆಸಿರುವ ಹಲವು ಗುತ್ತಿಗೆದಾರರಿಗೆ ಒಟ್ಟು 270 ಕೋ.ರೂ.ಗೂ ಹೆಚ್ಚಿನ ಮೊತ್ತ ಬರಬೇಕಿದೆ. ಉಳಿದಂತೆ ಎತ್ತಿನಹೊಳೆ ಯೋಜನೆ ಕಾಮಗಾರಿ, ಜಿಲ್ಲಾ ಪಂಚಾಯಿತಿ ವತಿಯಿಂದ ನಡೆದಿರುವ ವಿವಿಧ ಕಾಮಗಾರಿಗಳಿಗೆ ಒಟ್ಟು 125 ಕೋ.ರೂ. ಸೇರಿ ಜಿಲ್ಲೆಯ ಗುತ್ತಿಗೆದಾರರಿಗೆ ಅಂದಾಜು 1,200 ಕೋ. ರೂ.ಗೂ ಹೆಚ್ಚಿನ ಬಾಕಿ ಪಾವತಿಯಾಗಬೇಕಿದೆ.

**ಜಿಲ್ಲೆಯಲ್ಲಿ ಬಾಕಿ ಇರುವ ಬಿಲ್‌ಗಳ ಮೊತ್ತ**

- ಲೋಕೋಪಯೋಗಿ– 292 ಕೋ.ರೂ.
- ಬೃಹತ್ ನೀರಾವರಿ– 381 ಕೋ.ರೂ.
- ಸಣ್ಣ ನೀರಾವರಿ –131 ಕೋ.ರೂ.
- ಜೆಜೆಎಂ– 270 ಕೋ.ರೂ.
- ಇತರೆ–126 ಕೋ.ರೂ.
- ಒಟ್ಟು 1,200 ಕೋ.ರೂ.

> **ರಾಜ್ಯ ಸರ್ಕಾರ ರಾಜ್ಯಾದ್ಯಂತ 37 ಸಾವಿರ ಕೋ.ರೂ. ಹಾಗು ಜಿಲ್ಲೆಯಲ್ಲಿ 1,200 ಕೋ.ರೂ. ಬಾಕಿ ಪಾವತಿ ಮಾಡಬೇಕಿದೆ. ಹೀಗಾಗಿ ಮಾ.6 ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿ ಹಣ ಬಿಡುಗಡೆಗೆ ಮನವಿ ಮಾಡಲಾಗುವುದು. ಸರ್ಕಾರ ಸ್ಪಂದಿಸದಿದ್ದರೆ ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ಹಾಗು ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಮುಷ್ಕರ ನಡೆಸಲು ರಾಜ್ಯಾಧ್ಯಕ್ಷ ನೇತೃತ್ವದಲ್ಲಿ ತೀರ್ಮಾನ ಕೈಗೊಳ್ಳಲಾಗುವುದು.**
> **-ಹೆಚ್.ಎಲ್.ಜ್ಞಾನೇಶ್, ಅಧ್ಯಕ್ಷ ಜಿಲ್ಲಾ ಗುತ್ತಿಗೆದಾರರ ಸಂಘ**

**ಲ್ಯಾಂಡ್ ಆರ್ಮಿ, ನಿರ್ಮಿತಿ ಕೇಂದ್ರಕ್ಕಿಲ್ಲ ಸಮಸ್ಯೆ**

ಲ್ಯಾಂಡ್ ಆರ್ಮಿ ಮತ್ತು ನಿರ್ಮಿತಿ ಕೇಂದ್ರದಿಂದ ಕೈಗೊಳ್ಳುವ ಕಾಮಗಾರಿಗಳಿಗೆ ಮೊದಲೇ ಠೇವಣಿ ಇಡುವುದರಿಂದ ಅಲ್ಲಿ ಕೈಗೊಳ್ಳುವ ಕಾಮಗಾರಿಗೆ ಹೊಡೆತ ಬೀಳುವುದಿಲ್ಲ. ಜಿಲ್ಲಾ ಪಂಚಾಯಿತಿ ವತಿಯಿಂದ ಮೊದಲಿನಂತೆ ಹೆಚ್ಚು ಕಾಮಗಾರಿ ನಡೆಸದೆ, ನರೇಗಾ ಮೂಲಕವೇ ನಡೆಯುವುದರಿಂದ ಅಲ್ಲಿಯೂ ಹೆಚ್ಚಿನ ಮೊತ್ತ ಬಾಕಿ ಉಳಿದಿಲ್ಲ. ಆದರೆ, ಪಿಡಬ್ಲ್ಯೂಡಿ, ನೀರಾವರಿ, ಜೆಜೆಎಂ, ಎತ್ತಿನಹೊಳೆ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಿಗೆ ಹೆಚ್ಚಿನ ಮೊತ್ತವನ್ನು ಸರ್ಕಾರ ಪಾವತಿ ಮಾಡಬೇಕಿದೆ.

**ಸಾಲದ ಸುಳಿಯಲ್ಲಿ ಕಂಟ್ರಾಕ್ಟರ್**

ಕೋಟಿ ಕೋಟಿ ರೂ. ವೆಚ್ಚದ ಕಾಮಗಾರಿಗಳನ್ನು ನಡೆಸಲು ಗುತ್ತಿಗೆದಾರರು ವಿವಿಧ ಮೂಲಗಳಿಂದ ಸಾಲ ಮಾಡಿ ಬಡ್ಡಿಗಾಗಿ ಹಣ ತಂದು ಕಾಮಗಾರಿ ನಡೆಸಿರುತ್ತಾರೆ. ಆದರೆ, ಕಾಮಗಾರಿ ಪೂರ್ಣಗೊಂಡು ಎರಡ್ಮೂರು ವರ್ಷಗಳೇ ಕಳೆದರೂ ಸರ್ಕಾರ ಹಣ ಬಿಡುಗಡೆ ಮಾಡದಿರುವುದರಿಂದ ಗುತ್ತಿಗೆದಾರರು ಸಾಲದ ಸುಳಿಯಲ್ಲಿ ಸಿಲುಕಿದ್ದು, ಸರ್ಕಾರದ ವಿರುದ್ಧ ಬೀದಿಗಿಳಿದು ಪ್ರತಿಭಟನೆ ನಡೆಸುವಂತಾಗಿದೆ.

**ಮಧ್ಯವರ್ತಿಗಳು, ಕಮೀಷನ್ ಹಾವಳಿ**

ಯಾವುದೇ ಕಾಮಗಾರಿ ನಡೆಸಬೇಕಾದರೂ ಕಮೀಷನ್, ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿ ಗುತ್ತಿಗೆದಾರರನ್ನು ಕಾಡುತ್ತಿದೆ. ಹಣ ಬಿಡುಗಡೆಗಾಗಿ ನೀಡಬೇಕಿರುವ ಪರ್ಸಂಟೇಜ್ ಹಿಂದಿನ ಸರ್ಕಾರದಿಂದ ಹೆಚ್ಚಾಗಿದೆ ಎಂಬ ಆರೋಪವೂ ಕೇಳಿ ಬಂದಿದೆ. ಪರ್ಸಂಟೇಜ್ ಕೊಡುವುದು ಕೆಲವೇ ಕೆಲವು ಇಲಾಖೆಯಲ್ಲಿ ಮಾತ್ರ ಕಡಿಮೆ ಇದ್ದರೆ, ಬಹುತೇಕ ಇಲಾಖೆಗಳಲ್ಲಿ ಹೆಚ್ಚಿದೆ. ಹಿಂದಿನಂತೆ ಪ್ಯಾಕೇಜ್ ಟೆಂಡರ್ ಮಾಡುತ್ತಿಲ್ಲ, ಇಲಾಖೆ, ಜಿಲ್ಲೆ ಜಿಲ್ಲೆಯನ್ನು ಸೇರಿಸಿ ಪ್ಯಾಕೇಜ್ ಮಾಡುತ್ತಿರುವುದರಿಂದ ಗುತ್ತಿಗೆದಾರರಿಗೆ ಕಾಲ ಕಾಲಕ್ಕೆ ಹಣ ಬಿಡುಗಡೆಯಾಗದೆ ಸಾಲಗಾರರಾಗುತ್ತಿದ್ದಾರೆ.

## ಪಾಲಿಕೆ ಇಂಜಿನೀಯರ್ ಕವಿತಾಗೆ ಕಿರುಕುಳ ಆರೋಪ

### ಮಹಿಳಾ ಪರ ಸಂಘಟಕರಿಂದ ಖಂಡನೆ: ಡಿ.ಸಿ.ಗೆ ದೂರು ನೀಡಲು ತೀರ್ಮಾನ

• ಪ್ರಜೋದಯ ವರದಿ




**ಹಾಸನ:** ಮಹಾನಗರ ಪಾಲಿಕೆ ಇಂಜಿನೀಯರ್ ಕೆ.ಆರ್.ಕವಿತಾ ಅವರ ಕಾರ್ಯವೈಖರಿ ಸಹಿಸದೆ ವಿನಾಃ ಕಾರಣ ಮಹಿಳಾ ಅಧಿಕಾರಿಗೆ ಕಿರುಕುಳ ನೀಡಲಾಗುತ್ತಿದೆ ಎಂದು ಮಹಿಳಾ ಪರ ಸಂಘಟಕರು ಆರೋಪಿಸಿದ್ದಾರೆ.

ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಸಾವಿತ್ರಿ ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕವಿತಾ ಅವರು ಯಾರ ಮುಲಾಜಿಗೂ ಒಳಗಾಗದೇ ತಮ್ಮ ಪಾಡಿಗೆ ತಮ್ಮ ಕೆಲಸವನ್ನು ದಕ್ಷತೆಯಿಂದ ಮಾಡಿಕೊಂಡು ಹೋಗುತ್ತಿದ್ದಾರೆ. ಆದರೆ, ಅದನ್ನು ಸಹಿಸದೆ, ಇತ್ತೀಚೆಗೆ ಒಂದಲ್ಲ, ಒಂದು ರೀತಿಯ ಕಿರುಕುಳ ನೀಡುತ್ತಿರುವುದನ್ನು ಕಳೆದ 15 ದಿನಗಳಿಂದ ಗಮನಿಸುತ್ತಿದ್ದೇವೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ ಜಿಲ್ಲಾಧಿಕಾರಿಗೆ ದೂರು ನೀಡುವುದಾಗಿ ಹೇಳಿದರು.

ಕವಿತಾ ಅವರು ಹಾಸನ ಮಾತ್ರವಲ್ಲದೇ ಅರಕಲಗೂಡು, ಸಕಲೇಶಪುರ, ಆಲೂರು ಸೇರಿ ವಿವಿಧ ಸ್ಥಳಗಳಲ್ಲಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ ಅನೇಕ ಸವಾಲು ಎದುರಿಸಿ

» ನಾಲ್ಕನೇ ಪುಟದಲ್ಲಿ

## ನಿಧಾನಕ್ಕೆ ಹೋಗು ಎಂದಿದ್ದಕ್ಕೆ ಕಾರು ಗುದ್ದಿಸಿ ಯುವಕನ ಕೊಲೆ

• ಪ್ರಜೋದಯ ವರದಿ



**ಹೊಳೆನರಸೀಪುರ:** ನಿಧಾನಕ್ಕೆ ಕಾರು ಓಡಿಸು ಎಂದಿದ್ದಕ್ಕೆ ಕಾರು ಚಾಲಕ ನಿಂತಿದ್ದ ನಾಲ್ವರಿಗೆ ಡಿಕ್ಕಿ ಹೊಡೆದ ಪರಿಣಾಮ ಯುವಕ ಮೃತಪಟ್ಟು, ಮೂವರು ಗಾಯಗೊಂಡಿರುವ ಘಟನೆ ಪಟ್ಟಣದ ಸೂರನಹಳ್ಳಿ ಬಡಾವಣೆಯಲ್ಲಿ ಸೋಮವಾರ ರಾತ್ರಿ ನಡೆದಿದೆ.

ಕೃಷ್ಣ ಎಂಬುವವರ ಪುತ್ರ, ಎಸ್.ಕೆ.ಮನು ಮೃತ (27) ದುರ್ದೈವಿ. ಸಹೋದರ ಸಂಬಂಧಿಕರಾದ ಅಭಿಷೇಕ್, ರಾಕೇಶ್ ಹಾಗು ಕುಶಾಲ್ ಎಂಬುವವರಿಗೆ ಗಾಯಗಳಾಗಿವೆ. ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕೋಟೆ ಬೀದಿಯ ಯುವಕ ಕೃತ್ಯ ಎಸಗಿದ್ದು ಕಾರು ಸಮೇತ ಪರಾರಿಯಾಗಿದ್ದಾನೆ ಎನ್ನಲಾಗಿದೆ. ಆದಿಚುಂಚನಗಿರಿ ಮಠಕ್ಕೆ ಹೋಗುವುದಕ್ಕಾಗಿ ಮೂವರು ಸಹೋದರರು ಚರ್ಚೆ ನಡೆಸುತ್ತಾ ಮನು ಅವರ ಮನೆ ಮುಂದೆ ನಿಂತಿದ್ದರು. ರಾತ್ರಿ 12ರ ಸಮಯದಲ್ಲಿ ಫಾರ್ಚೂನರ್ ಕಾರಿನಲ್ಲಿ ಜೋರಾಗಿ ಯುವಕ ಬಂದಿದ್ದು, ತನ್ನ ಪಕ್ಕದ ಬಾಗಿಲನ್ನು ತೆರೆದಿದ್ದ. ಅದನ್ನು ನೋಡಿದ ನಾಲ್ವರು, ನಿಧಾನಕ್ಕೆ ಹೋಗು, ಬಾಗಿಲು ಹಾಕಿಕೋ ಎಂದು ಜೋರಾಗಿ ಕೂಗಿದ್ದಾರೆ. ಅದರಿಂದ ಕೆರಳಿದ ಆತ ಸ್ವಲ್ಪ ದೂರ ಮುಂದೆ ಹೋಗಿದ್ದವನು ಹಿಂತಿರುಗಿ ಬಂದು ನಿಂತಿದ್ದರಿಗೆ ಗುದ್ದಿಸಿದ್ದಾನೆ. ಅಪ ಘಾತ ದಲ್ಲಿ ಮನು ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಪಟ್ಟಣ ಠಾಣೆ ಪೊಲೀಸರು ಪರಿಶೀಲಿಸಿ, ಆರೋಪಿ ಪತ್ತೆಗೆ ಬಲೆ ಬೀಸಿದ್ದಾರೆ.

## ಸ್ಥಗಿತಗೊಂಡ ಏತನೀರಾವರಿ ಘಟಕಗಳ ಪರಿಶೀಲನೆ

### ಶೀಘ್ರ ಚಾಲನೆ ನೀಡುವಂತೆ ಶಾಸಕ ಸಿಮೆಂಟ್ ಮಂಜು ಸೂಚನೆ

• ಪ್ರಜೋದಯ ವರದಿ

**ಹಾಸನ:** ಸಾವಿರಾರು ಎಕರೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಬೇಕಾದ ಏತ ನೀರಾವರಿ ಘಟಕಗಳು ಸ್ಥಗಿತಗೊಂಡಿರುವುದರಿಂದ ರೈತರು ಭೂಮಿ ಇದ್ದರೂ ನೀರಾವರಿ ಸೌಕರ್ಯವಿಲ್ಲದೆ ಕೈಕಟ್ಟಿ ಕೂರುವಂತಾಗಿದೆ.

ಸ್ಥಗಿತಗೊಂಡಿರುವ ಹಲವು ಏತನೀರಾವರಿ ಘಟಕಗಳ ಪೈಕಿ ಹಾಸನ ತಾಲ್ಲೂಕು ಕಂದಲಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಉಪ್ಪಳ್ಳಿ ಗ್ರಾಮದ ಏತನೀರಾವರಿ ಘಟಕ ಹಾಗು ಆಲೂರು ತಾಲ್ಲೂಕು ದೊಡ್ಡಕಣಗಾಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಸವನಪುರ ಗ್ರಾಮದಲ್ಲಿ ಸ್ಥಗಿತಗೊಂಡಿರುವ ಏತನೀರಾವರಿ ಘಟಕಕ್ಕೆ ಮಂಗಳವಾರ ಶಾಸಕ ಸಿಮೆಂಟ್ ಮಂಜು ಅವರು ಪರಿಶೀಲನೆ ನಡೆಸಿ,



ಸರಿಪಡಿಸಿ ಚಾಲನೆ ನೀಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ನೀರಾವರಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

» ನಾಲ್ಕನೇ ಪುಟದಲ್ಲಿ

## ಜಿಲ್ಲಾ ನ್ಯಾಯಾಲಯಕ್ಕೆ ಮತ್ತೆ ಹುಸಿ ಬಾಂಬ್ ಬೆದರಿಕೆ

• ಪ್ರಜೋದಯ ವರದಿ

**ಹಾಸನ:** ನಗರದ ಜಿಲ್ಲಾ ನ್ಯಾಯಾಲಯದ ನ್ಯಾಯಾ ಧೀಶರ ಕೊಠಡಿಯನ್ನು ಸ್ಫೋಟಗೊಳಿಸಲಾಗುತ್ತದೆಂಬ ಹುಸಿ ಬಾಂಬ್ ಬೆದರಿಕೆ ಕರೆ ಮಂಗಳವಾರ ಬಂದಿದ್ದು, ಕೆಲ ಹೊತ್ತು ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಶ್ವಾನದಳ ಹಾಗು ಬಾಂಬ್ ನಿಷ್ಕ್ರಿಯ ದಳ ಸಿಬ್ಬಂದಿ ತಪಾಸಣೆ ನಡೆಸಿದ ಬಳಿಕ ಸುಳ್ಳು ಸಂದೇಶವೆಂದು ಗೊತ್ತಾದ ಮೇಲೆ ಎಲ್ಲರೂ ನಿರಾಳರಾದರು. ಮಂಗಳವಾರ ಬೆಳಗಿನ ಜಾವ 5.40ಕ್ಕೆ ನ್ಯಾಯಾಲಯದ ಅಧಿಕೃತ ಇ-ಮೇಲ್ ವಿಳಾಸ Pærameeza hussain@hotmail.com R ಎಂಬ ಐಡಿಯಿಂದ ಸಂದೇಶ ಕಳುಹಿಸಲಾಗಿದ್ದು, ಬೆಳಿಗ್ಗೆ 11.50ಕ್ಕೆ ನ್ಯಾಯಾಧೀಶರ ಕೊಠಡಿಯಲ್ಲಿ ಸೈನೈಡ್ ವಿಷಾನಿಲ ತುಂಬಿದ ಆರ್‌ಡಿಎಕ್ಸ್ ಬಾಂಬ್ ಸ್ಫೋಟಗೊಳ್ಳುತ್ತದೆ. ಬೆಳಿಗ್ಗೆ 11 ಗಂಟೆಯೊಳಗೆ ನಿರಪರಾಧಿ ನಾಗರಿಕನನ್ನು ಸ್ಥಳಾಂತರಿಸಬೇಕೆಂಬ ಬೆದರಿಕೆ ಬರಹಗಳಿದ್ದವು. ಜೊತೆಗೆ 26/11 ಮುಂಬೈ ಭಯೋತ್ಪಾದಕ ದಾಳಿ ಹಾಗು ಅಜ್ಮಲ್ ಕಸಬ್ ಪ್ರಕರಣದ ಬಗ್ಗೆ ಉಲ್ಲೇಖಿಸಲಾಗಿದೆ.

ಘಟನೆಯ ಮಾಹಿತಿ ಸಿಕ್ಕ ತಕ್ಷಣ ಡಿವೈಎಸ್‌ಪಿ ಪಾಲಾಕ್ಷ ಅವರ ನೇತೃತ್ವದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಶ್ವಾನದಳ ಹಾಗು ಬಾಂಬ್ ನಿಷ್ಕ್ರಿಯ ದಳದ ಸಹಾಯದಿಂದ ಕಟ್ಟಡ ಪರಿಶೀಲಿಸಿದರು. ಸ್ಫೋಟಕ ವಸ್ತುಗಳು ಇಲ್ಲವೆಂದು ಧೃಢೀಕರಣ ನೀಡಿದ ಬಳಿಕ ನ್ಯಾಯಾಲಯದ ಕಾರ್ಯಚಟುವಟಿಕೆಗಳು ಪುನರಾರಂಭಗೊಂಡವು. ಜಿಲ್ಲಾ ನ್ಯಾಯಾಲಯದ ಆಡಳಿತಾಧಿಕಾರಿ ಡಿ. ವಸಂತ ಅವರು ನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಜ.6, ಫೆ. 16ರಂದು ಇದೇ ರೀತಿಯ ಸಂದೇಶ ಜಿಲ್ಲಾ ನ್ಯಾಯಾಲಯದ ಅಧಿಕೃತ ಇ-ಮೇಲ್‌ಗೆ ಬಂದಿತ್ತು. 2025ರ ಡಿ. 15 ರಂದು ಜಿಲ್ಲಾಧಿಕಾರಿ ಕಚೇರಿ ಸ್ಫೋಟಿಸುವ ಮತ್ತು ಆಲೂರು ತಾಲ್ಲೂಕು ನ್ಯಾಯಾ ಲಯಕ್ಕೂ ಹುಸಿ ಬೆದರಿಕೆ ಸಂದೇಶ ರವಾನೆಯಾಗಿತ್ತು.

### ವಸ್ತ್ರ ಅಲಂಕಾರಕ್ಕೆ ಕೋಕ್ ನೀಡಿದ ಜಿಲ್ಲಾಡಳಿತ | ಕಡೆಗೂ ಶಾಂತಿಯುತ ಜಾತ್ರೆ

# ಪುಷ್ಪಾಲಂಕೃತ ಲಕ್ಷ್ಮೀ ನರಸಿಂಹಸ್ವಾಮಿ ರಥೋತ್ಸವ

• ಪ್ರಜೋದಯ ವರದಿ

**ಹೊಳೆನರಸೀಪುರ :** ಪಟ್ಟಣದ ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ರಥೋತ್ಸವ ಈ ಬಾರಿ ವಸ್ತ್ರ ಅಲಂಕಾರವಿಲ್ಲದೆ ಪುಷ್ಪಾಲಂಕಾರದೊಂದಿಗೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶಾಂತಿಯುತವಾಗಿ ನೆರವೇರಿತು.

ರಥಕ್ಕೆ ವಸ್ತ್ರ ಹಾಕುವ ವಿಚಾರವಾಗಿ ಸೋಮವಾರ ತಡರಾತ್ರಿ ತನಕ ಜೆಡಿಎಸ್ ಹಾಗು ಕಾಂಗ್ರೆಸ್ ನಡುವೆ ವಾಗ್ವಾದ ಸೃಷ್ಟಿಯಾಗಿತ್ತು. ಜಿಲ್ಲಾಡಳಿತದ ಅಧಿಕಾರಿಗಳು ಎರಡೂ ಕಡೆಯ ನಾಯಕರ ಮನವೊಲಿಕೆಗೆ ಪ್ರಯತ್ನಿಸಿದ್ದರೂ ಪ್ರಯೋಜನವಾಗಿ ರಲಿಲ್ಲ. ಬಳಿಕ ದೇವರ ಕಾರ್ಯಕ್ಕೆ ಅಡ್ಡಿಪಡಿಸಬಾರದೆಂದು ಅಧಿಕಾರಿಗಳು ಮನವರಿಕೆ ಮಾಡಿಕೊಟ್ಟ ಬಳಿಕ ವಸ್ತ್ರವಿಲ್ಲದೆ ಕೇವಲ ಹೂವುಗಳಿಂದ ರಥ ಅಲಂಕರಿಸಿ ಉತ್ಸವ ಮಾಡುವ ತೀರ್ಮಾನಕ್ಕೆ ಬಂದರು. ರಾದ್ಧಾಂತಕ್ಕೆ ಎಡೆಮಾಡಿಕೊಟ್ಟಿದ್ದ ಪ್ರಹಸನ ಸುಖಾಂತ್ಯ ಕಂಡಿತು. ಅಧಿಕಾರಿಗಳ ಸಂಧಾನ ಪ್ರಕ್ರಿಯೆ ಕಡೆಗೂ ಯಶಸ್ವಿಯಾಯಿತು.

ಜಾತ್ರಾ ಮಹೋತ್ಸವ ಹಿನ್ನಲೆಯಲ್ಲಿ ಪ್ರತಿ ವರ್ಷದಂತೆ ಧಾರ್ಮಿಕ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಪೂರ್ವ ನಿಗದಿತ ಮುಹೂರ್ತದಲ್ಲಿ ರಥಕ್ಕೆ ಪೂಜೆ ಸಲ್ಲಿಸಿದ ಶಾಸಕ ಹೆಚ್.ಡಿ.ರೇವಣ್ಣ, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಶಾಸ್ತ್ರೋಕ್ತವಾಗಿ ರಥ ಎಳೆದು ನಮಸ್ಕರಿಸಿದರು. ಸಂಸದ ಶ್ರೇಯಸ್ ಎಂ.ಪಟೇಲ್ ಹಾಗು ಬೆಂಬಲಿಗರು ಪಾಲ್ಗೊಂಡಿದ್ದರು. ರಥೋತ್ಸವದ ಮುನ್ನಾ ದಿನವಾದ ಸೋಮವಾರ ದಿಂದಲೇ ಸರತಿ ಸಾಲಿನಲ್ಲಿ ನಿಂತು ಭಕ್ತರು ದರ್ಶನ ಪಡೆದರು. ಮಂಗಳವಾರ ಕೇತುಗ್ರಸ್ತ ಚಂದ್ರ ಗ್ರಹಣ ಇದ್ದುದರಿಂದ ಮಧ್ಯಾಹ್ನ 1ರ ವರೆಗೆ ದೇವಾಲಯದಲ್ಲಿ ದರ್ಶನಕ್ಕೆ ಅವಕಾಶ ಮಾಡಲಾಗಿತ್ತು. ನಂತರ ಸಂಜೆ 7ರ ವರೆಗೆ ದೇವಾಲಯ ಮುಚ್ಚಲಾಗಿತ್ತು. ನಂತರ ಶುದ್ಧೀಕರಣ, ಅಭಿಷೇಕ, ಪೂಜೆ ಹಾಗು ವಿಶೇಷ ಅಲಂಕಾರ ಮಾಡಲಾಯಿತು. ರಾತ್ರಿ ಶಾಂತೋತ್ಸವ ನೆರವೇರಿತು.





ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನೆಲೆಸಿರುವ ಶ್ರೀ ನರಸಿಂಹ ಆರಾಧಕರು ಪವಿತ್ರ ಹೇಮಾವತಿ ನದಿಯಲ್ಲಿ ಮಿಂದೆದ್ದು ಪೂಜೆಯಲ್ಲಿ ಪಾಲ್ಗೊಂಡರು. ಗ್ರಹಣ ಕಾಲ ಹೊರತುಪಡಿಸಿ ಉಳಿದ ಸಮಯದಲ್ಲಿ ಭಕ್ತರಿಗೆ ಪುಳಿಯೊಗರೆ, ಲಡ್ಡು, ಮೊಸರನ್ನ ಪ್ರಸಾದ ವಿತರಿಸಲಾಯಿತು.

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಮಾತನಾಡಿ, ರಥಕ್ಕೆ ವಸ್ತ್ರ ಹಾಕಿ ಸಿಂಗರಿಸುವುದು ವಾಡಿಕೆ. ತಾಲ್ಲೂಕು ಆಡಳಿತ ಪೂರ್ವಭಾವಿ

» ನಾಲ್ಕನೇ ಪುಟದಲ್ಲಿ

## ಗ್ರಹಣ : ಚನ್ನಕೇಶವಸ್ವಾಮಿ ಗರ್ಭಗುಡಿ ಬಾಗಿಲು ಬಂದ್



• ಪ್ರಜೋದಯ ವರದಿ

**ಬೇಲೂರು :** ಕೇತುಗ್ರಸ್ತ ಚಂದ್ರ ಗ್ರಹಣದ ಹಿನ್ನಲೆಯಲ್ಲಿ ಶ್ರೀ ಚನ್ನಕೇಶವಸ್ವಾಮಿ ದೇವಾಲಯದ ಗರ್ಭಗುಡಿ ಬಾಗಿಲನ್ನು ಮಂಗಳವಾರ ಸಂಭವಿಸಿದ ಗ್ರಹಣಾವಧಿಯಲ್ಲಿ ಬಂದ್ ಮಾಡಲಾಯಿತ್ತು.

ಗ್ರಹಣ ಮುಗಿದ ನಂತರ ಸಂಜೆ ದೇವಾಲಯದಲ್ಲಿ ಶುದ್ಧಿಕಾರ್ಯಗಳು ಹಾಗು ಶಾಸ್ತ್ರೋಕ್ತ ಪೂಜಾ ವಿಧಿ ವಿಧಾನಗಳು ನೆರವೇರಿಸಲಾಯಿತು. ಗ್ರಹಣದ ಸೂಕ್ಷ್ಮ ಧಾರ್ಮಿಕ ನಿಯಮಾವಳಿಗಳ ಅನ್ವಯ ಅರ್ಚಕರು ಪೂಜೆ ಸಲ್ಲಿಸಿದ ಬಳಿಕ ದೇವಾಲಯದ ಗರ್ಭಗುಡಿ ಬಾಗಿಲು ಮುಚ್ಚಲಾಯಿತು. ಗ್ರಹಣ ಕಾಲದಲ್ಲಿ ದೇವರ ಮೂರ್ತಿಗೆ ನೇರವಾಗಿ ಯಾವುದೇ

» ನಾಲ್ಕನೇ ಪುಟದಲ್ಲಿ

C M Y K C M Y K C M Y K C M Y K

# ಮೊಬೈಲ್, ಎಐ, ರಕ್ಷಣಾ ವ್ಯವಸ್ಥೆಗಳ ಬೆನ್ನೆಲುಬು

ಅತ್ಯಾವಶ್ಯಕ ಹಾಗೂ ನಿರ್ಣಾಯಕ ಭೂ-ಖನಿಜಗಳು ಇಂದು ಶಕ್ತಿಯ ಹೊಸ ವಾಸ್ತವಿ ಕತೆಯಾಗಿವೆ. ಇವು ಶುದ್ಧ ಇಂಧನ ಪರಿವರ್ತನೆ, ವಿದ್ಯುತ್ ಚಲನೆಯ ವ್ಯವಸ್ಥೆಗಳು, ಉನ್ನತ ಇಲೆಕ್ಟ್ರಾನಿ, ಕೃತಕ ಬುದ್ಧಿಮತ್ತೆ (ಎಐ) ಮತ್ತು ಆಧುನಿಕ ರಕ್ಷಣಾ ವ್ಯವಸ್ಥೆ ಗಳ ಹಿಂದಿನ ಮೂಲ ಚಾಲನಾಶಕ್ತಿಯಾಗಿವೆ. ಭಾರತವು ಈ ಕ್ಷೇತ್ರದಲ್ಲಿ ಎರಡು ಸುರಕ್ಷಿತ ಸರಬರಾಜು ಸರಪಳಿಗಳ ವೇದಿಕೆಗಳಲ್ಲಿ ತನ್ನ ಕಾರ್ಯತಂತ್ರವನ್ನು ಕೇಂದ್ರೀಕರಿಸಿದೆ.

ಕಾಲೇಜಿನ ದಿನಗಳಲ್ಲಿ ಬೆಂಗಳೂರಿನ ಅವೆನ್ಯೂ ರಸ್ತೆಯ ಸೆಕೆಂಡ್ ಹ್ಯಾಂಡ್ ಪುಸ್ತಕದ ಅಂಗಡಿಗಳಲ್ಲಿ ಆಯ್ದ ಲೈಫ್ ಮತ್ತು ನ್ಯಾಷನಲ್ ಜಿಯೋಗ್ರಾಫಿಕ್ ಪತ್ರಿಕೆಗಳನ್ನು ಕೊಂಡು, ಓದಿ, ಶೆಲ್ಫಿನಲ್ಲಿ ಚಂದವಾಗಿ ಶೇಖರಿಸಿಡುವ ಹವ್ಯಾಸವಿತ್ತು. ಮಾಹಿತಿ ಭಂಡಾರಗಳಾದ ಈ ನಿಯತಕಾಲಿಕೆಗಳ ಪುಟಗಳನ್ನು ಆಗಾಗ ತಿರುವುತ್ತ ಮಧುರಸ್ಮೃತಿಯನ್ನು ನವೀಕರಿಸುವಾಗ ನ್ಯಾಷನಲ್ ಜಿಯೋಗ್ರಾಫಿಕ್ ಅಕ್ಟೋಬರ್ 1982ರ ಪುಟಗಳಲ್ಲಿ ಸೆಮಿ ಕಂಡಕ್ಟರ್ ಚಿಪ್ ಆವಿಷ್ಕಾರಕ್ಕೆ ಸಿಲಿಕಾ ಮರಳು ಪೂರಕವೆಂದು ವಿವರಿಸಿದ ಲೇಖನ ಇಂದಿನ ಪರಿಸರಕ್ಕೆ ಸಾಮ್ಯ ಕಲ್ಪಿಸಿತು.

ನಾಲ್ಕು ದಶಕಗಳ ಹಿಂದೆ ಪ್ರಕೃತಿದತ್ತವಾದ ಅಪರೂಪದ ಸಿಲಿಕಾ ಮರಳು ಇಲೆಕ್ಟ್ರಾನಿಕ್ ಜಗತ್ತಿನ ಮಹತ್ವದ ಆವಿಷ್ಕಾರಗಳಿಗೆ ನಾಂದಿಯಾದಂತೆ, ಪ್ರಸ್ತುತ ಜಾಗತಿಕ ಚರ್ಚೆಯಲ್ಲಿರುವ ನೈಸರ್ಗಿಕ ಕೊಡುಗೆಗಳಾದ ಅಪರೂಪದ ಭೂ-ಖನಿಜಾಂಶಗಳು ಅಧುನಿಕ ಇಲೆಕ್ಟ್ರಾನಿಕ್ ಯುಗದ ಕ್ಯಾಟಲಿಸ್ಟ್ ಅಗುತ್ತಿರುವುದು ಡೇಜಾವು ಸನ್ನಿವೇಶದ ವಿರಾಟರೂಪವೆನಿಸಿತು.

ನಿಜ. ಚಿನ್ನ, ಬೆಳ್ಳಿ, ಅಷ್ಟೇಕೆ ತಾಮ್ರವೂ ಅಪರೂಪದ ಲೋಹಗಳ ಗುಂಪಿಗೇ ಸೇರುತ್ತವೆ. ಆದರೆ ನಾನಿಲ್ಲಿ ಹೇಳುತ್ತಿರುವುದು ಹದಿನೇಳು ಅತ್ಯಂತ ಅಪರೂಪದ-ಅಗತ್ಯದ ವಿಶೇಷ ಭೂ-ಖನಿಜಾಂಶಗಳ ಕುರಿತು. ಈ ವಿಶೇಷ ಅಥವಾ ಅಪರೂಪದ ಭೂ-ಖನಿಜಾಂಶಗಳು ಆಧುನಿಕ ತಂತ್ರಜ್ಞಾನಗಳಿಗೆ ಅವಶ್ಯವೆನಿಸಿದ ಕಚ್ಚಾ ವಸ್ತು.

ಇವುಗಳಲ್ಲಿ ನಿಯೋಡಿಮಿಯಂ, ಪ್ರಾಸಿಯೊಡಿಮಿಯಂ, ಲ್ಯಾಂಥನಂ, ಸೀರಿಯಂ ಮುಂತಾದವು ಸಾಮಾನ್ಯವಾಗಿ ಬಳಸಲ್ಪಡುವಂಥವು. ಇವುಗಳನ್ನು ವಾಹನಗಳ ಎಕ್ಸಾ ವ್ಯವಸ್ಥೆಗಳಲ್ಲಿ ಮತ್ತು ಕೈಗಾರಿಕೆಯಲ್ಲಿ ಪ್ರೇರಕಗಳಾಗಿ ಬಳಸಲಾಗುತ್ತಿದೆ. ವಿದ್ಯುತ್ ವಾಹನಗಳು ಮತ್ತು ಇಲೆಕ್ಟ್ರಾನಿಕ್‌ಗಳಲ್ಲಿ ಶಾಶ್ವತ ಮ್ಯಾಗ್ನೆಟ್ ತಯಾರಿಸಲೂ ಇವು ಅವಶ್ಯಕ.

ಜತೆಗೆ, ವಿವಿಧ ಇಲೆಕ್ಟ್ರಾನಿಕ್ ಸಾಧನಗಳ ಬ್ಯಾಟರಿಗಳಲ್ಲಿ, ವಿಮಾನದ ಎಂಜಿನ್‌ಗಳಿಗೆ ಅಗತ್ಯವಾದ ಉಚ್ಚ ಬಲದ ಮಿಶ್ರಲೋಹಗಳಲ್ಲಿ, ಸೆಮಿಕಂಡಕ್ಟರ್ ಉತ್ಪಾದನೆಯಲ್ಲಿ, ಹಾಗೆಯೇ ಪರಮಾಣು ರಿಯಾಕ್ಟರ್‌ಗಳಲ್ಲಿ ನಿಯಂತ್ರಣ ರಾಡ್‌ಗಳಾಗಿ ಈ ಭೂ-ಖನಿಜಾಂಶಗಳನ್ನು ಬಳಸಲಾಗುತ್ತದೆ. ಜಗತ್ತಿನಲ್ಲಿ ಇವುಗಳ ಲಭ್ಯತೆ ಸೀಮಿತವಾಗಿರುವುದರಿಂದ, ಈ ಭೂ-ಖನಿಜಾಂಶಗಳು ಆರ್ಥಿಕ ಮತ್ತು ಭೌಗೋಳಿಕ/ರಾಜಕೀಯ ದೃಷ್ಟಿಯಿಂದ ಮಹತ್ವ ಪಡೆದುಕೊಂಡಿದ್ದು, ದೇಶಗಳು ಸ್ವದೇಶಿ ಉತ್ಪಾದನೆ ಮತ್ತು ಸುರಕ್ಷಿತ ಸರಬರಾಜು ಸರಪಳಿಗಳತ್ತ ಗಮನ ಹರಿಸುತ್ತಿವೆ.

ಗ್ರೀನ್‌ಲ್ಯಾಂಡ್‌ನಲ್ಲಿ ಸುಮಾರು ಹದಿನೈದು ಲಕ್ಷ ಟನ್‌ಗಳಷ್ಟು ಅಪರೂಪದ ಭೂ-ಖನಿಜಗಳ ಭಂಡಾರವಿರುವುದರಿಂದ, ಅಮೆರಿಕವು ಗ್ರೀನ್ ಲ್ಯಾಂಡ್ ಅನ್ನು ತನ್ನ ತೆಕ್ಕೆಗೆ ಸೇರಿಸಿಕೊಳ್ಳುವ ಹುಚ್ಚು ಸಾಹಸವನ್ನು ಪ್ರದರ್ಶಿಸುತ್ತಿದೆ.

ಈ ಅಪರೂಪದ ಭೂ-ಖನಿಜಾಂಶಗಳ ಅನ್ವೇಷಣೆ ಇತಿಹಾಸದ ದೃಷ್ಟಿಯಿಂದ ಇತ್ತೀಚಿನದ್ದೇ. ಚಿನ್ನ ಮತ್ತು ಬೆಳ್ಳಿಯ ಉಪಯೋಗ ಸಾವಿರಾರು ವರ್ಷಗಳ ಹಿಂದೆಯೇ ತಿಳಿದಿತ್ತು. ಇಲೆಕ್ಟ್ರಾನಿಕ್ ವಲಯದ ಪ್ರಗತಿಯಿಂದಾಗಿ ಅಪರೂಪದ ಭೂ-ಖನಿಜಗಳ ಕುರಿತಾಗಿ ನಮಗೆ ಕಳೆದ ಎಂಟು ದಶಕಗಳಿಂದ ತಿಳಿಯಲಾರಂಭಿಸಿದೆ.

ಮೊದಲ ಅಪರೂಪದ ಭೂ-ಖನಿಜಾಂಶವಾದ ಇಟ್ರಿಯಾ ಅನ್ನು 1794ರಲ್ಲಿ ಪತ್ತೆ ಹಚ್ಚಲಾಗಿದ್ದು, ಕೊನೆಯದಾದ ಪ್ರೊಮಿಥಿಯಂ ಅನ್ನು 1945ರಲ್ಲಿ ಗುರುತಿಸಲಾಯಿತು. ಇಂದಿನ ಅಂದಾಜಿನ ಪ್ರಕಾರ, ಭೂಮಿಯಲ್ಲಿ ಇನ್ನೂ ಗಣಿಗಾರಿಕೆ ಮಾಡದೆ ಉಳಿದಿರುವ ಬಂಗಾರದ ಪ್ರಮಾಣ ಐವತ್ತು ಸಾವಿರ ಟನ್‌ಗಳು ಮಾತ್ರವಾಗಿದ್ದರೆ, ಅಪರೂಪದ ಭೂ-ಖನಿಜಾಂಶಗಳ ಜಾಗತಿಕ ಸಂಗ್ರಹವು 110 ಕೋಟಿ ಟನ್‌ಗಳಷ್ಟು ದೊಡ್ಡದಾಗಿದೆ.

ಇವುಗಳನ್ನು ಅಪರೂಪದ ಭೂ-ಖನಿಜಾಂಶಗಳು ಎಂದು ಕರೆಯುವುದಕ್ಕೆ ಕಾರಣ, ಅವು ಭೂಮಿಯಲ್ಲಿ ಅತಿ ಕಡಿಮೆ ಸಾಂದ್ರತೆಯಲ್ಲಿ ಕಂಡುಬರುವುದೇ ಹೊರತು, ಸಂಪೂರ್ಣವಾಗಿ ಲಭ್ಯವಿಲ್ಲವೆಂದಲ್ಲ. ಸ್ವಲ್ಪ ಪ್ರಮಾಣದ ಅಪರೂಪದ ಭೂ-ಖನಿಜಾಂಶಗಳನ್ನು ಪಡೆಯಲು ಪರ್ವತದಷ್ಟು ಮಣ್ಣು ಮತ್ತು ಕಲ್ಲುಗಳನ್ನು ಸಂಸ್ಕರಿಸಬೇಕಾಗುತ್ತದೆ. ಈ ಸಂಸ್ಕರಣಾ ಪ್ರಕ್ರಿಯೆಗಳು ಅತ್ಯಂತ ಸಂಕೀರ್ಣವಾಗಿದ್ದು, ಪರಿಸರಕ್ಕೆ ಹೆಚ್ಚು ಮಾಲಿನ್ಯ ಉಂಟುಮಾಡುವ ಸ್ವಭಾವದ್ದಾಗಿವೆ.

ಜಗತ್ತಿನ ಅಪರೂಪದ ಭೂ-ಖನಿಜಾಂಶಗಳ ಒಟ್ಟು ಸಂಗ್ರಹವು ಚೀನಾದಲ್ಲಿ ಅತ್ಯಂತ ಹೆಚ್ಚು ಅಂದರೆ, ಸುಮಾರು 4.5 ಕೋಟಿ ಟನ್‌ಗಳಷ್ಟಿವೆ. ಮಧ್ಯಪ್ರಾಚ್ಯದಲ್ಲಿ ತೈಲ ಇದ್ದಂತೆ, ಚೀನಾದಲ್ಲಿ ಈ ಭೂ-ಖನಿಜದ ಭಂಡಾರವಿದೆ. ಬ್ರೆಜಿಲ್‌ನಲ್ಲಿ ಸುಮಾರು 2.1 ಕೋಟಿ ಟನ್‌ಗಳಿದ್ದರೆ, ಭಾರತವು ಮೂರನೆಯ ಸ್ಥಾನದಲ್ಲಿದ್ದು ಸುಮಾರು 69 ಲಕ್ಷ ಟನ್‌ಗಳಷ್ಟು ಸಂಗ್ರಹವನ್ನು ಹೊಂದಿದೆ.

ಹೀಗೆ ಭೂ-ಖನಿಜದ ಪ್ರಯೋಜನಗಳನ್ನು ಪಡೆದಿರುವ ಚೀನಾ, ವೆಚ್ಚ ದಕ್ಷತೆ ಹಾಗೂ ತಾಂತ್ರಿಕ ಪ್ರಗತಿಯಿಂದಾಗಿ ತನ್ನ ಸ್ಪರ್ಧಿಗಳಿಗಿಂತ ಮುನ್ನಡೆ ಸಾಧಿಸಿದೆ; ಇಂದು ಅಪರೂಪದ ಭೂ-ಖನಿಜಾಂಶಗಳ ಗಣಿಗಾರಿಕೆ ಮತ್ತು ಸಂಸ್ಕರಣೆಯನ್ನು ನಿಯಂತ್ರಿಸುವ ಮೂಲಕ ಚೀನಾ ಬಹುತೇಕ ಜಾಗತಿಕ ಏಕಸ್ವಾಮ್ಯವನ್ನು ಹೊಂದಿದೆ. ಬೆಲೆಗಳು, ಸರಬರಾಜು ಮತ್ತು ಬೇಡಿಕೆಗಳನ್ನು ಪ್ರಾಯೋಗಿಕವಾಗಿ ಚೀನಾದ ನಿರ್ಧರಿಸಲಾಗುತ್ತಿದೆ.

ಇತರೆ ದೇಶಗಳಿಗೆ, ಕನಿಷ್ಠ ಈಗಿನ ಪರಿಸ್ಥಿತಿಯಲ್ಲಿ, ಚೀನಾ ನಿಗದಿಪಡಿಸುವ ವೇಗ ಮತ್ತು ನೀತಿಗಳನ್ನು ಅನುಸರಿಸುವುದನ್ನು ಹೊರತುಪಡಿಸಿ ಬೇರೆ ಆಯ್ಕೆಯಿಲ್ಲ. ಈ ವರ್ಷ ಚೀನಾ ಈ ಭೂ-ಖನಿಜಾಂಶಗಳ ಸರಬರಾಜಿನ ಮೇಲೆ ಜಾಗತಿಕ ಮಟ್ಟದಲ್ಲಿ ನಿರ್ಬಂಧಗಳನ್ನು ವಿಧಿಸಿರುವುದು ಈ ಏಕಾಧಿಕಾರದ ಶಕ್ತಿಯ ಫಲ.

ಏಕಸಾಮ್ಯವು ಅಸಮತೋಲನವನ್ನು ಹುಟ್ಟುಹಾಕಬಹುದು. ಚೀನಾ ಅಸಹಕಾರಿಯಾಗಿ ನಡೆದುಕೊಂಡರೆ, ಜಾಗತಿಕ ಸರಬರಾಜು ಸರಪಳಿಗಳು ಹಾಗೂ ಅನೇಕ ದೇಶಗಳ ಉತ್ಪಾದನಾ ವಲಯವೇ ಅಸ್ತವ್ಯಸ್ತವಾಗುವ ಸಾಧ್ಯತೆ ಇದೆ. ಇಂಥ ಏಕಾಧಿಕಾರವು ಜಾಗತಿಕ ಸರ್ವತೋಮುಖ ಬೆಳವಣಿಗೆಗೆ ಸೂಕ್ತ ಪರಿಸರವನ್ನು ಒದಗಿಸುವುದಿಲ್ಲ.

ಅಪರೂಪದ ಈ ಅತ್ಯಾವಶ್ಯಕ ಹಾಗೂ ನಿರ್ಣಾಯಕ ಭೂ-ಖನಿಜಗಳು ಇಂದು ಶಕ್ತಿಯ ಹೊಸ ವಾಸ್ತವಿಕತೆಯಾಗಿವೆ. ಇವು ಶುದ್ಧ ಇಂಧನ ಪರಿವರ್ತನೆ, ವಿದ್ಯುತ್ ಚಲನೆಯ ವ್ಯವಸ್ಥೆಗಳು, ಉನ್ನತ ಇಲೆಕ್ಟ್ರಾನಿಕ್ಸ್, ಕೃತಕ ಬುದ್ಧಿಮತ್ತೆ (ಎಐ) ಮತ್ತು ಆಧುನಿಕ ರಕ್ಷಣಾ ವ್ಯವಸ್ಥೆಗಳ ಹಿಂದಿನ ಮೂಲ ಚಾಲನಾಶಕ್ತಿಯಾಗಿವೆ.

ಭಾರತವು ಈ ಕ್ಷೇತ್ರದಲ್ಲಿ ಎರಡು ಸುರಕ್ಷಿತ ಸರಬರಾಜು ಸರಪಳಿಗಳ ವೇದಿಕೆಗಳಲ್ಲಿ ತನ್ನ ಕಾರ್ಯತಂತ್ರವನ್ನು ಕೇಂದ್ರೀಕರಿಸಿದೆ. ದೇಶದೊಳಗಿನ ಅನ್ವೇಷಣೆ, ಶುದ್ಧೀಕರಣ, ಮರು ಬಳಕೆ ಮತ್ತು ಮರುಪಡೆಯುವಿಕೆಯನ್ನು ಒಗ್ಗೂಡಿಸಿದ ಸಂಘಟಿತ ಮಿಷನ್ ಮೊದಲನೆಯದಾದರೆ, ವಿದೇಶಗಳಲ್ಲಿ ಅವಲಂಬನೆಯಿಂದುಂಟಾಗುವ ಅಪಾಯ ತಗ್ಗಿಸಲು ಅನೇಕ ಸಹಭಾಗಿತ್ವಗಳನ್ನು ವಿಸ್ತರಿಸುವ ರಾಜತಾಂತ್ರಿಕ ಮಿಷನ್ ಎರಡನೆಯದಾಗಿದೆ.

ಅವುಗಳಲ್ಲಿ ಅಮೆರಿಕ ನೇತೃತ್ವದ ಫೋರ್ಜ್ ಒಪ್ಪಂದವು ಅತ್ಯವಶ್ಯಕ ಭೂ-ಖನಿಜಗಳ ಸರಬರಾಜು ಸರಪಳಿಯನ್ನು ವೈವಿಧ್ಯಗೊಳಿಸಿ, ವಿಶ್ವಾಸಾರ್ಹ ಮತ್ತು ಸುರಕ್ಷಿತ ಸಹಕಾರವನ್ನು ನಿರ್ಮಿಸುವ ದಾರಿ ತೋರಿಸುತ್ತದೆ. ಫೋರ್ಜ್ ಉಪಕ್ರಮವು ತಂತ್ರಜ್ಞಾನ ಸರಬರಾಜು ಸರಪಳಿಯ ವಿಶಾಲ ದೃಷ್ಟಿಕೋನದೊಂದಿಗೆ ಹೊಂದಾಣಿಕೆಯಾಗಿದ್ದು, ಇದರಲ್ಲಿ ಭಾರತವು ಇತ್ತೀಚೆಗೆ ಸಹಿ ಮಾಡಿದ ಪ್ಯಾಕ್ಸ್ ಸಿಲಿಕಾ ಕೂಡ ಸೇರಿದೆ.

ಪ್ಯಾಕ್ಸ್ ಸಿಲಿಕಾ ಉದ್ದೇಶವು ಉನ್ನತ ಮಟ್ಟದ ಸೆಮಿಕಂಡಕ್ಟರ್‌ಗಳು, ಸುಧಾರಿತ ಉತ್ಪಾದನೆ ಮತ್ತು ಎಐ ಮೂಲಸೌಕರ್ಯವನ್ನು ಸುರಕ್ಷಿತಗೊಳಿಸುವುದಾಗಿದೆ. ಈ ಹಿನ್ನೆಲೆಯಲ್ಲಿ, ಭಾರತವು ಇತ್ತೀಚೆಗೆ ಬ್ರೆಜಿಲ್ ಜತೆ ಮಾಡಿಕೊಂಡ ಒಪ್ಪಂದವೂ ಮಹತ್ವ ಪಡೆದಿದ್ದು, ಅನ್ವೇಷಣೆ, ಸಂಸ್ಕರಣೆ ಮತ್ತು ತಂತ್ರಜ್ಞಾನ ಸಹಕಾರದ ಅವಕಾಶಗಳನ್ನು ಅದು ವಿಸ್ತರಿಸುತ್ತದೆ.

ಒಂದೆಡೆ ಅಮೆರಿಕ ನೇತೃತ್ವದ ಜಾಗತಿಕ ಉಪಕ್ರಮಗಳಲ್ಲಿ ಭಾರತ ಭಾಗವಹಿಸುತ್ತಿದ್ದರೆ, ಮತ್ತೊಂದೆಡೆ ಬ್ರೆಜಿಲ್‌ನಂಥ ಸಂಪನ್ಮೂಲ ಸಮೃದ್ಧ ದೇಶಗಳೊಂದಿಗೆ ನೇರ ಸಹಭಾಗಿತ್ವಗಳನ್ನು ಬೆಳೆಸುವ ಮೂಲಕ, ಅತಿಯಾದ ಅವಲಂಬನೆಯ ಅಪಾಯವನ್ನು ಕಡಿಮೆ ಮಾಡಿ ತನ್ನ ತಂತ್ರಾತ್ಮಕ ಆಯ್ಕೆಗಳನ್ನು ಬಲಪಡಿಸುತ್ತಿದೆ.

ವಿಶಿಷ್ಟ ಲಕ್ಷಣಗಳ ಆಧಾರದ ಮೇಲೆ, ಭೂಮಿಯಲ್ಲಿ ಒಟ್ಟು ಹದಿನೇಳು ಅಪರೂಪದ ಭೂ-ಖನಿಜಾಂಶಗಳಿವೆಯೆಂದು ಜಿಯೋ-ಕೆಮಿಸ್ಟ್‌ಗಳು ಖಚಿತಪಡಿಸಿದ್ದಾರೆ. ಅವುಗಳಲ್ಲಿ ಎಂಟು ಮಾತ್ರವೇ ಭಾರತದಲ್ಲಿ ಲಭ್ಯವಿವೆ. ಲಾಂಥನಮ, ಸೀರಿಯಮ್, ನಿಯೋಡಿಮಿಯಂ, ಪ್ರಾಸಿಯೊಡಿಮಿಯಂ ಮತ್ತು ಸಮಾರಿಯಂ ಮುಂತಾದ ಭೂ-ಖನಿಜಾಂಶಗಳ ಜಗತ್ತಿನ ಮೂರನೇ ಅತಿದೊಡ್ಡ ಸಂಗ್ರಹ ಹೊಂದಿರುವುದರ ಜತೆಗೆ, ಕಡಿಮೆ ವೆಚ್ಚದ ಕಾರ್ಮಿಕ ಶಕ್ತಿಯ ಬೆಂಬಲದಿಂದ ಭಾರತವು ಕೆಲವು ಉತ್ಪಾದನಾ ಚಟುವಟಿಕೆಗಳಲ್ಲಿ ಮುಂಚೂಣಿಗೆ ಬರಲು ಸಾಧ್ಯವಿದೆ.

ಕಲ್ಲಿದ್ದಲಿನಲ್ಲಿ ಸಹ ಸ್ವಾಭಾವಿಕವಾಗಿ ಕೆಲವು ಪ್ರಮಾಣದ ಅಪರೂಪದ ಭೂ-ಖನಿಜಾಂಶಗಳು ಇರುತ್ತವೆ. ಕಲ್ಲಿದ್ದಲನ್ನು ಸುಟ್ಟ ನಂತರ ದೊರಕುವ - ಆಶ್‌ನಲ್ಲಿ ಈ ಖನಿಜಾಂಶಗಳು ಹೆಚ್ಚು ಸಾಂದ್ರತೆಯಲ್ಲಿ ಇರುತ್ತವೆ. ಇಂಥವನ್ನು ಹೊರತೆಗೆಯುವ ಯೋಜನೆಯನ್ನು ಭಾರತವು ಬೆಲ್ಜಿಯಂನ ಕಂಪನಿಗಳ ಸಹಕಾರದೊಂದಿಗೆ ರೂಪಿಸುತ್ತಿದೆ.

ಸಾಮಾನ್ಯವಾಗಿ ಮೊನಜೈಟ್ ಮುಂತಾದ ಖನಿಜಗಳಲ್ಲಿ ಅನೇಕ ಅಪರೂಪದ ಭೂ-ಖನಿಜಾಂಶಗಳಿವೆ. ಭಾರತದಲ್ಲಿ, ವಿಶೇಷವಾಗಿ ಕೇರಳದ ಕರಾವಳಿ ಮರಳುಗಳಲ್ಲಿ ಮೊನ ಜೈಟ್‌ನ ಅಂಶಗಳು ಕಂಡುಬರುತ್ತವೆ. ಆದರೆ ಇವುಗಳನ್ನು ಶುದ್ಧೀಕರಿಸುವುದು ಹುಲ್ಲಿನ ಮೆದೆಯಲ್ಲಿ ಸೂಜಿ ಹುಡುಕುವಂಥ ಪ್ರಕ್ರಿಯೆ.

ಉದಾಹರಣೆಗೆ, ಅಪರೂಪದ ಭೂ-ಖನಿಜಾಂಶಗಳನ್ನು ಬೇರ್ಪಡಿಸಲು ದ್ರಾವಣ ಎಕ್ಸ್ ಟ್ರಾಕ್ಷನ್ ಮತ್ತು ಐಯಾನ್ ವಿನಿಮಯಗಳಂಥ ಬಹು ಹಂತದ ಸಂಕೀರ್ಣ ಪ್ರಕ್ರಿಯೆಗಳನ್ನು ಸಂಪೂರ್ಣವಾಗಿ ನಿಭಾಯಿಸುವ ಪರಿಣತಿಯ ಅಗತ್ಯವಿರುತ್ತದೆ. 1950ರ, ಜಗತ್ತು ಅಪರೂಪದ ಭೂ-ಖನಿಜಾಂಶಗಳ ಮಹತ್ವವನ್ನು ಅರಿಯುವ ದಶಕಗಳ ಮುಂಚೆಯೇ, ಭಾರತವು ಈ ತಂತ್ರಾತ್ಮಕ ಖನಿಜಗಳ ಗಣಿಗಾರಿಕೆ ಮತ್ತು ಸಂಸ್ಕರಣೆಗೆ ಇಂಡಿಯಾ ರೇರ್ ಅ ಲಿಮಿಟೆಡ್ ಕಂಪನಿಯನ್ನು ಸ್ಥಾಪಿಸಿತ್ತು.

75 ವರ್ಷಗಳ ನಂತರದ ಇಲೆಕ್ಟ್ರಾನಿಕ್ ಯುಗದಲ್ಲಿ, ಈ ಸಂಸ್ಥೆ ಭಾರತಕ್ಕೆ ಮುಂಚೂಣಿಯ ಸ್ಥಾನ ಒದಗಿಸಿಕೊಡಬೇಕಾಗಿತ್ತು. ಆದರೆ ವಾಸ್ತವದಲ್ಲಿ, ತೆರಿಗೆದಾರರ ಹಣದಿಂದ ಪೋಷಿಸಲಾಗುತ್ತಿರುವ ಈ ಪಿಎಸ್‌ಯು ಸುಪ್ತ ಸ್ಥಿತಿಯಲ್ಲಿದ್ದು, ಪುರಾತನ ಗಣಿಗಳು, ಹಳೆಯ ತಂತ್ರ ಜ್ಞಾನ ಮತ್ತು ಸಿಎಕ್ಸ್‌ಒ ಹುದ್ದೆಗಳಲ್ಲಿನ ನೇತೃತ್ವದ ಕೊರತೆಗಳ ಸಂಸ್ಥೆಯಾಗಿ ಪುನರುತ್ಥಾನಕ್ಕಾಗಿ ಸರಕಾರದ ಬೆಂಬಲದ ನಿರೀಕ್ಷಣೆಯಲ್ಲಿದೆ.


ಅಪರೂಪದ ಭೂ-ಖನಿಜಾಂಶಗಳ ಕ್ಷೇತ್ರದಲ್ಲಿ ಭಾರತವು ಇತ್ತೀಚಿನ ವರ್ಷಗಳಲ್ಲಿ ಮಹತ್ವದ ಮುನ್ನಡೆ ಸಾಧಿಸುತ್ತಿದ್ದು, ಅವುಗಳ ಮೇಲೆ ಅವಲಂಬಿತವಾಗಿರುವ ಕೈಗಾರಿಕೆಗಳಿಗೆ ಭವಿಷ್ಯದ ಸರಬರಾಜನ್ನು ಭದ್ರಪಡಿಸುವ ದಿಕ್ಕಿನಲ್ಲಿ ಕ್ರಮಗಳನ್ನು ಕೈಗೊಳ್ಳುತ್ತಿದೆ.

ದೇಶದೊಳಗೆ ಅನ್ವೇಷಣೆ, ಸಂಸ್ಕರಣೆ, ಮರುಬಳಕೆ ಮತ್ತು ಮರುಪಡೆಯುವಿಕೆಯನ್ನು ಒಗ್ಗೂಡಿಸಿದ ನೀತಿಕ್ರಮಗಳು, ಜತೆಗೆ ವಿದೇಶಗಳಲ್ಲಿ ತಂತ್ರಾತ್ಮಕ ಸಹಭಾಗಿತ್ವಗಳು, ಸರಬರಾಜಿನ ಅಪಾಯಗಳನ್ನು ಕಡಿಮೆ ಮಾಡುತ್ತಿವೆ. ಈ ಪ್ರಯತ್ನಗಳ ಮೂಲಕ ವಿದ್ಯುತ್ ವಾಹನಗಳು, ಇಲೆಕ್ಟ್ರಾನಿಕ್, ಸೆಮಿಕಂಡಕ್ಟರ್‌ಗಳು ಮತ್ತು ರಕ್ಷಣಾ ಕೈಗಾರಿಕೆಗಳಿಗೆ ಅಗತ್ಯವಾದ ಅಪರೂಪದ ಭೂ-ಖನಿಜಾಂಶಗಳ ಸ್ಥಿರ ಮತ್ತು ವಿಶ್ವಾಸಾರ್ಹ ಪೂರೈಕೆಯನ್ನು ಖಚಿತಪಡಿಸುವಲ್ಲಿ ಭಾರತವು ಭವಿಷ್ಯದಲ್ಲಿ ಪ್ರಮುಖ ಪಾತ್ರ ವಹಿಸುವ ಸಾಧ್ಯತೆ ಇದೆ.

ಭಾರತವು ಇಂದಿನ ಅತ್ಯಂತ ಅನುಕೂಲಕರ ಪರಿಸರದ ಸುವರ್ಣಾವಕಾಶವನ್ನು ಬಳಸಿ ಕೊಂಡರೆ, ಭೂತಕಾಲದ ಅನುತ್ಪಾದಕ ತಪ್ಪುಗಳನ್ನು ಅಳಿಸಬಹುದು, ಭವಿಷ್ಯದ ಯಶಸ್ಸು ಖಾತ್ರಿಯಾಗಬಹುದು.

**- ಪ್ರಕಾಶ** ಹೆಗಡೆ

**» ನಾಲ್ಕು ದಶಕಗಳ ಹಿಂದೆ ಪ್ರಕೃತಿದತ್ತವಾದ ಅಪರೂಪದ ಸಿಲಿಕಾ ಮರಳು ಇಲೆಕ್ಟ್ರಾನಿಕ್ ಜಗತ್ತಿನ ಮಹತ್ವದ ಆವಿಷ್ಕಾರಗಳಿಗೆ ನಾಂದಿಯಾದಂತೆ, ಪ್ರಸ್ತುತ ಜಾಗತಿಕ ಚರ್ಚೆಯಲ್ಲಿರುವ ನೈಸರ್ಗಿಕ ಕೊಡುಗೆಗಳಾದ ಅಪರೂಪದ ಭೂ-ಖನಿಜಾಂಶಗಳು ಅಧುನಿಕ ಇಲೆಕ್ಟ್ರಾನಿಕ್ ಯುಗದ ಕ್ಯಾಟಲಿಸ್ಟ್ ಅಗುತ್ತಿರುವುದು ಡೇಜಾವು ಸನ್ನಿವೇಶದ ವಿರಾಟರೂಪವೆನಿಸಿತು.**






# ಸರಳ ಟ್ರಿಕ್ಸ್ ಕಲಿತರೆ ಇಂಗ್ಲಿಷ್ ಪರೀಕ್ಷೆ ಸುಲಭ!

ಎಸ್ ಎಸ್ ಎಲ್ ಸಿ ಪರೀಕ್ಷೆಗಳು ಇನ್ನೇನು ಬಂದು ಬಿಡುತ್ತವೆ. ಈ ಬಾರಿಯ ಪರೀಕ್ಷೆಗಳು ಬಹಳ ಸುಲಭವಾಗಿರುತ್ತವೆ ಎಂದು ಇಲಾಖೆ ಹೇಳಿಕೊಂಡಿದೆ. ಅದರ ಜೊತೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಕೂಡ ಶೇಕಡ 50ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದರೆ ಮಾತ್ರ ಶಾಲೆಯ ಫಲಿತಾಂಶ ಚೆನ್ನಾಗಿರುತ್ತದೆ ಎಂದು ಕೂಡ ಹೇಳಿದ್ದಾರೆ. ಅಂದರೆ ಶಾಲೆಯ ಫಲಿತಾಂಶಗಳು ವಿದ್ಯಾರ್ಥಿಗಳ ಅಂಕಗಳ ಮೇಲೆ ನಿಗದಿಯಾಗಿವೆ. ಎಲ್ಲಾ ವಿದ್ಯಾರ್ಥಿಗಳು ಹೆಚ್ಚು ಅಂಕಗಳನ್ನು ಪಡೆದುಕೊಂಡರೆ ಶಾಲೆಯ ಋಣಾತ್ಮಕ ಫಲಿತಾಂಶ ಹೆಚ್ಚಾಗುತ್ತದೆ.

ಸಾಧಾರಣವಾಗಿ ಎಲ್ಲಾ ವಿದ್ಯಾರ್ಥಿಗಳಿಗೆ ಕಷ್ಟದ ವಿಷಯವೆಂದರೆ ಗಣಿತ ಬಳಿಕ ವಿಜ್ಞಾನ, ಒಂದಷ್ಟು ವಿದ್ಯಾರ್ಥಿಗಳಿಗೆ ಸಮಾಜ ವಿಜ್ಞಾನ ಇರಬಹುದೇನೋ, ಆದರೆ ಮೂರನೆಯ ಕಷ್ಟದ ವಿಷಯ ಎಂದು ಬಂದರೆ ಅದು ಇಂಗ್ಲಿಷ್. ಅದರಲ್ಲೂ ದ್ವಿತೀಯ ಭಾಷೆಯನ್ನ ಭಾಷೆಯಾಗಿ ಆಂಗ್ಲ ಭಾಷೆಯನ್ನು ಕಲಿಯುವ ಸ್ಟೇಟ್ ಸಿಲಬಸ್ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಕಷ್ಟವೇ ಸರಿ.

ಇದಕ್ಕೆ ಕಾರಣ ಮೊದಲನೆಯದಾಗಿ ಆಂಗ್ಲ ಭಾಷಾ ವ್ಯಾಕರಣ. ಗ್ರಾಮರ್‌ನಲ್ಲಿ ಒಂದು ಪ್ರಶ್ನೆ ಪತ್ರಿಕೆಯಲ್ಲಿ ಇರುವ ವಾಕ್ಯ ಇನ್ನೊಂದು ಪ್ರಶ್ನೆ ಪತ್ರಿಕೆಯಲ್ಲಿ ಇರುವುದಿಲ್ಲ. ಹೆಚ್ಚಿನ ಪ್ರಶ್ನೆಪತ್ರಿಕೆಯ ಪ್ರಶ್ನೆಗಳು ಸ್ವಲ್ಪ ಸ್ವಲ್ಪ ಟ್ರಿಕ್ಕಿಯಾಗಿದ್ದು ಅವುಗಳನ್ನು ಉತ್ತರಿಸುವಲ್ಲಿ ಮಕ್ಕಳು ಎಡವಿ ಒಂದೊಂದೇ ಅಂಕಗಳನ್ನು ಕಳೆದುಕೊಳ್ಳುತ್ತಾರೆ.

ಇದಕ್ಕೆ ಉದಾಹರಣೆಯಾಗಿ ಹೇಳಬೇಕೆಂದರೆ ಮೊಟ್ಟಮೊದಲನೆಯದಾಗಿ ಆರ್ಟಿಕಲ್ಸ್. ಇದು ಕನ್ನಡದಲ್ಲಿ ಇಲ್ಲ, ಆಂಗ್ಲ ಭಾಷೆಯಲ್ಲಿ ಇರುವುದು ಮೂರೇ ಆರ್ಟಿಕಲ್ಸ್ ಅವುಗಳೆಂದರೆ ಎ ಆ್ಯನ್ ಮತ್ತು ದ. ಇದರಲ್ಲಿ ಎ ಮತ್ತು ಆ್ಯನನ್ನು ಬಳಸುವ ಟ್ರಿಕ್ಕಿ ಸಮಸ್ಯೆಗಳು ಎಲ್ಲಾ ವಿದ್ಯಾರ್ಥಿಗಳಿಗೂ ಗೊತ್ತಿದ್ದರೂ ಕೂಡ ಕನ್ಫ್ಯೂಷನ್. ಇದನ್ನು ನೆನಪಿಡಲು ಸುಲಭ ವಿಧಾನವೆಂದರೆ ಕನ್ನಡ ಅಥವಾ ಹಿಂದಿ ಭಾಷೆಯ ಸ್ವರಗಳು ಮತ್ತು ವ್ಯಂಜನಗಳನ್ನು ನೆನಪಿಟ್ಟುಕೊಳ್ಳುವುದು. ಕನ್ನಡದ ಸ್ವರಾಕ್ಷರಗಳಿಂದ ಯಾವೆಲ್ಲಾ ಪದಗಳು ಓದುವಾಗ ಬರುತ್ತವೆಯೋ ಅವುಗಳ ಮುಂದೆ ಆ್ಯನ್ ಅನ್ನು ಬಳಸುವುದು. ಇನ್ನು ಒಂದೇ ವಸ್ತುವಿದ್ದು, ಆ ವಸ್ತುವಿನ ಹೆಸರು ಓದುವಾಗ ವ್ಯಂಜನಾಕ್ಷರವಾಗಿದ್ದರೆ ಅದರ ಆಂಗ್ಲ ಭಾಷಾ ಅಕ್ಷರಗಳನ್ನು ಗಣನೆಗೆ ತೆಗೆದುಕೊಳ್ಳದೆ ಅದರ ಮುಂದೆ ಎ ಆರ್ಟಿಕಲ್ ಅನ್ನು ಬಳಸಬೇಕು. ಇದಕ್ಕೆ ನಾವು ಅ ದಿಂದ ಅ: ದವರೆಗಿನ ಶಬ್ದಗಳಿಂದ ಪ್ರಾರಂಭವಾಗುವ ಎಲ್ಲಾ ಪದಗಳ ಮುಂದೆ ಆ್ಯನ್ ಅನ್ನು ಬಳಸುತ್ತೇವೆ. ಇದನ್ನು 8 ಮತ್ತು 9 ಹಾಗೂ 10ನೇ ತರಗತಿಯ ಎಲ್ಲಾ ವಿದ್ಯಾರ್ಥಿಗಳು ನೆನಪಿಟ್ಟುಕೊಳ್ಳಬೇಕು.

ಇನ್ನು ಲ್ಯಾಂಗ್ವೇಜ್ ಫಂಕ್ಷನ್ ಎನ್ನುವಂತಹ ಒಂದು ಸ್ಪೋಕನ್ ಇಂಗ್ಲಿಷ್‌ಗೆ ಸಂಬಂಧಿಸಿದ ಪ್ರಶ್ನೆ ಬರುತ್ತದೆ. ಇದರಲ್ಲಿ ಒಂದು ಹತ್ತರಷ್ಟು ಬೇರೆಬೇರೆ ಭಾಷಾ ಕಾರ್ಯಗಳು. ಉದಾಹರಣೆಗೆ ಅಡ್ವೈಸ್, ಅಪೊಲಜಿ, ಡೈರೆಕ್ಷನ್, ರಿಕ್ವೆಸ್ಟ್, ಸೀಕಿಂಗ್ ಹೆಲ್ಪ್, ಅಗ್ರಿಯಿಂಗ್, ರಿಜೆಕ್ಟಿಂಗ್ ಇನ್ವಿಟೇಶನ್, ಎಕ್ಸೆಪ್ಟಿಂಗ್, ಆರ್ಡರ್, ಗಿವಿಂಗ್ ಹೆಲ್ಪ್ ಮೊದಲಾದವು. ಅಡಿಗೆರೆ ಹಾಕಿದ ವಾಕ್ಯವನ್ನು ಓದಿಕೊಂಡು ಅದರ ಅರ್ಥವನ್ನು ನೋಡಿಕೊಂಡು ಅದು ಯಾವ ಲ್ಯಾಂಗ್ವೇಜ್ ಫಂಕ್ಷನ್‌ಗೆ ಸೇರಿದೆ ಎಂಬುದನ್ನು ವಿದ್ಯಾರ್ಥಿಗಳು ಬರೆಯಬೇಕಾಗುತ್ತದೆ. ಇದಕ್ಕೆ ನಾಲ್ಕು ಉತ್ತರಗಳನ್ನು ಕೊಡಲಾಗಿರುತ್ತದೆ. ಅದರಲ್ಲಿ ಒಂದನ್ನು ಆರಿಸಬೇಕು. ಇಂಗ್ಲಿಷ್ ತುಂಬಾ ಕಷ್ಟ ಎನ್ನುವ ವಿದ್ಯಾರ್ಥಿಗಳು ನಾಲ್ಕು ಉತ್ತರಗಳನ್ನು ಕೂಡ ಬರೆದು ಸರಿ ಅನಿಸಿದ್ದಕ್ಕೆ ಅಡಿಗೆರೆ ಎಳೆಯಬಹುದು.

ಮುಂದೆ ಕ್ವೆಶ್ಚನ್ ಟ್ಯಾಗ್ ಎನ್ನುವಂತ ಪ್ರಶ್ನೆ. ನಾವು ಕನ್ನಡದಲ್ಲಿ ಹೌದಲ್ವಾ, ಅಲ್ವಾ ಹೀಗೆ ಮಾತನಾಡುವಾಗ ತುಂಬಾ ಸಲ ಬಳಸುತ್ತೇವೆ. ಆದರೆ ಅದನ್ನು ಆಂಗ್ಲ ಭಾಷೆಯಲ್ಲಿ ಬಳಸುವಾಗ ಮಾಡೆಲ್ ವರ್ಬ್ ಕೂಡ ಅದರಲ್ಲಿ ಸೇರಿಕೊಳ್ಳುವ ಕಾರಣ ಅದು ಆಯಾ ಮಾಡೆಲ್ ವರ್ಬ್‌ಗೆ ಅನುಗುಣವಾಗಿ ಬದಲಾಗುತ್ತಾ ಹೋಗುತ್ತದೆ. ಉದಾಹರಣೆಗೆ ವಾಕ್ಯವು ಪಾಸಿಟಿವ್ ಆಗಿದ್ದರೆ ಕ್ವೆಶ್ಚನ್ ಟ್ಯಾಗ್ ನೆಗೆಟಿವ್ ಆಗಿರುತ್ತದೆ. ಪ್ರತಿ ಕ್ವೆಶ್ಚನ್ ಟ್ಯಾಗ್‌ಗೆ ಕ್ವೆಶ್ಚನ್ ಮಾರ್ಕ್ ಬಳಸುವುದು ಕಡ್ಡಾಯವಾಗಿರುತ್ತದೆ. ಅದರ ಜೊತೆಯಲ್ಲಿ ವರ್ಬ್ ಪಾಸ್ಟ್ ಟೆನ್ಸ್ ಆಗಿದ್ದರೆ ಡಿಡ್ ಫಾರ್ಮ್, ವರ್ಬ್ ಪ್ರೆಸೆಂಟ್ ಟೆನ್ಸ್ ಆಗಿದ್ದರೆ ಸಿಂಗ್ಯುಲರ್‌ನಲ್ಲಿ ಡಸ್ ಫಾರ್ಮ್, ಪ್ಲೂರಲ್‌ನಲ್ಲಿ ಡು ಫಾರ್ಮ್, ವರ್ಬ್ ಫ್ಯೂಚರ್ ಟೈಮ್ ಆಗಿದ್ದರೆ ವಿಲ್ ಬದಲಿಗೆ ಓಂಟ್ ಪದವನ್ನು ಬಳಸಬೇಕಾಗುತ್ತದೆ. ಹಾಗೆಯೇ ಶಲ್ ಪದಕ್ಕೆ ಶಾಂಟ್, ಐ ಯಾಮ್ ಇರುವಲ್ಲಿ ಆರ್ ನ್ಂಟ್ ಐ ಪದಗಳನ್ನು ಬಳಸಿ ಕ್ವೆಶ್ಚನ್ ಟ್ಯಾಗ್ ಬರೆಯಬೇಕಾಗುತ್ತದೆ.

ಇನ್ನು ಒಂದು ಪದವನ್ನು ನೌನ್ ಅಥವಾ ವರ್ಬ್ ಆಗಿ ವಾಕ್ಯ ಮಾಡಲು ಕೇಳುತ್ತಾರೆ. ಅಕಸ್ಮಾತ್ ಕೊಟ್ಟ ಪದ ನೌನ್ ಆಗಿ ಬಳಸಬೇಕಾದರೆ ಅದನ್ನು ವಾಕ್ಯದ ಮೊದಲಿಗೇ ಬರೆಯಬೇಕು. ಅದನ್ನು ಆಗಿ ಉಪಯೋಗಿಸಬೇಕು ಎಂಬ ಪ್ರಶ್ನೆ ಇದ್ದರೆ ಮೊದಲೆಂದು ನಾವು ಅಥವಾ ಯಾವುದಾದರೂ ಹೆಸರನ್ನು ಅಥವಾ ಪ್ರೊನೌನ್ ಇನ್ನೂ ಸುಲಭಿಕರಿಸಬೇಕೆಂದರೆ ಐ ಎನ್ನುವ ಪ್ರೊನೌನ್ ಹಾಕಿ ಅದರ ನಂತರ ಕೊಟ್ಟ ಪದವನ್ನು ಬಳಸಿ ಬರೆದರೆ ಅದು ವರ್ಬ್ ಆಗಿಬಿಡುತ್ತದೆ.

ಮುಂದೆ ಒಂದು ಪದವನ್ನು ಬ್ರಾಕೆಟ್ ಒಳಗೆ ಕೊಟ್ಟು ವಾಕ್ಯದ ಮಧ್ಯದಲ್ಲಿ ಆದರ ಸರಿಯಾದ ರೂಪವನ್ನು ಬರೆಯಲು ಹೇಳುತ್ತಾರೆ. ಅಲ್ಲಿ ಸಫಿಕ್ಸ್ ಅನ್ನು ಸೇರಿಸಿ ವಾಕ್ಯಕ್ಕೆ ಸರಿ ಹೊಂದುವ ಪದ ಬಳಸಬೇಕಾಗುತ್ತದೆ. ಉದಾಹರಣೆಗೆ ಮೆಂಟ್, ಇಂಗ್, ಲಿ, ಎಲ್, ಮೆಂಟಲ್ ಇತ್ಯಾದಿ.

ಮತ್ತೆ ಎಡಿಟ್ ಎಂಬ ಎರಡು ತಪ್ಪುಗಳ ವಾಕ್ಯದ ಪ್ರಶ್ನೆಯೊಂದು ಎರಡು ಅಂಕಗಳಿಗೆ ಬರುತ್ತದೆ. ಸಾಧಾರಣವಾಗಿ ಅದು ಪ್ರಶ್ನೆ ಪತ್ರಿಕೆಯ 17 ನೆಯ ಪ್ರಶ್ನೆ. ಅಲ್ಲಿನ ತಪ್ಪುಗಳಿಗೆ ಎರಡು ಕ್ಲೂ ಕೊಡಲಾಗುತ್ತದೆ. ಉದಾಹರಣೆಗೆ ಕ್ಯಾಪಿಟಲ್ ಲೆಟರ್ ಸೇರಿಸಿ, ಸ್ಪೆಲ್ಲಿಂಗ್ ಸರಿಪಡಿಸಿ, ಅಡ್ವರ್ಬ್ ಸರಿಮಾಡಿ, ವರ್ಬ್ ಸರಿಮಾಡಿ, ಆರ್ಟಿಕಲ್ ಸರಿಮಾಡಿ, ಪ್ರಿಪೊಸಿಶನ್ ಸರಿ ಮಾಡಿ ಹೀಗೆ. ಅವುಗಳನ್ನು ಹುಡುಕಿ ಸರಿ ಮಾಡಿ ಬರೆಯಬೇಕು.

ಇನ್ನು ಪ್ರಶ್ನೆ ಸಂಖ್ಯೆ 31 ರ ಬಳಿಕ ಎಲ್ಲವೂ ಸ್ಕೋರಿಂಗ್ ಪ್ರಶ್ನೆಗಳು. ಪಾಠ ಓದದೆ, ಭಾಷೆ ಬಂದರೆ ಬರೆಯುವಂತಹ ಪ್ರಶ್ನೆಗಳು. ಮೊದಲನೆಯದಾಗಿ ಚಿಕ್ಕದಾಗಿ ಕೊಟ್ಟ ಪ್ರೊಫೈಲ್ ಅನ್ನು ವಾಕ್ಯ ಮಾಡಿ ಬರೆಯುವುದು, ನಂತರ ಅರ್ಧಂಬರ್ಧ ಕೊಟ್ಟ ಕಥೆಯ ಪದಗಳಿಗೆ ವಾಕ್ಯ ರಚನೆ ಮಾಡುತ್ತಾ ಪೂರ್ತಿ ಕತೆ ಬರೆಯುವುದು, ಮತ್ತೆ ಚಿತ್ರ ನೋಡಿ ತನಗೆ ಕಾಣಿಸಿದ ಹಾಗೆ, ಅಥವಾ ಕಥೆ ಸೃಷ್ಟಿಸಿ ಬರೆಯುವುದು. ತದನಂತರ ಪದ್ಯ ಇರುತ್ತದೆ. ಅದನ್ನು ಪೂರ್ಣಗೊಳಿಸುವುದು. ಬಳಿಕ ಪದ್ಯವೊಂದರ ಈ ವರ್ಷಕ್ಕೆ ಮೊದಲನೇ ಪದ್ಯದ ಭಾವಾರ್ಥವನ್ನು ನಾಲ್ಕು ಅಂಕಗಳಿಗೆ ಬರೆಯಬೇಕು. ಅದರ ಬಳಿಕ ಅಲ್ಲೊಂದು ಮೊದಲು ಓದದೆ ಇರುವ ಅನ್ ನೋನ್ ಪ್ಯಾಸೇಜ್ ಇರುತ್ತದೆ. ಅದನ್ನು ಓದಿ ಅದರ ಮೇಲಿನ ಎರಡು ಪ್ರಶ್ನೆಗಳಿಗೆ ಎರಡು ಮತ್ತೆರಡು ನಾಲ್ಕು ಅಂಕಗಳಿಗೆ ಪ್ರಶ್ನೆ ಬರೆಯುವುದು.

ಕೊನೆಯದಾಗಿ ಪ್ರಬಂಧ ಮತ್ತು ಪತ್ರ ಲೇಖನ. ಯಾವುದಾದರೂ ಕಚೇರಿಗೆ ಬರೆಯುವ ಪತ್ರಕ್ಕೂ, ಬಂಧು ಮಿತ್ರರಿಗೆ ಬರೆಯುವ ಪತ್ರಕ್ಕೂ ಫ್ರಮ್ ಅಡ್ರೆಸ್ ಒಂದೇ ಆಗಿರುತ್ತದೆ. ಯಾರಿಗೆ ಬರೆಯುತ್ತೇವೆ ಎನ್ನುವ ಟು ಅಡ್ರೆಸ್ ಬೇರೆ ಬೇರೆ ಆಗಿರುವುದನ್ನು ಪ್ರಶ್ನೆಯಲ್ಲಿ ಗಮನಿಸಬೇಕು.

ಹೆಚ್ಚಿನ ಮಕ್ಕಳಿಗೆ ಕಷ್ಟ ರಿಪೋರ್ಟೆಡ್ ಸ್ಪೀಚ್ ಮತ್ತು ಆಕ್ಟಿವ್ ವಾಯ್ಸ್‌ನಿಂದ ಪ್ಯಾಸಿವ್ ವಾಯ್ಸ್‌ಗೆ ಬದಲಾಯಿಸುವ ಪ್ರಕ್ರಿಯೆ. ಅಂದರೆ ಇಂಡೈರೆಕ್ಟ್ ಅಥವಾ ರಿಪೋರ್ಟೆಡ್ ಸ್ಪೀಚ್ ಎಂದರೆ ನಾಟಕ ರೂಪದಲ್ಲಿ ಇರುವ ವಾಕ್ಯವನ್ನು ಭೂತಕಾಲದಲ್ಲಿ ಕಥೆಯ ರೂಪದಲ್ಲಿ ಬರೆಯುವುದು. ಪ್ಯಾಸಿವ್ ವಾಯ್ಸ್ ಎಂದರೆ ವಾಕ್ಯದ ಸಬ್ಜೆಕ್ಟ್ ಮತ್ತು ಪ್ರಿಡಿಕೇಟ್ ಅದಲು ಬದಲಾಗಿ ಬಿಡುತ್ತದೆ. ಕೆಲವೊಮ್ಮೆ ವರ್ಬ್ ಪದದಲ್ಲಿ ಸಣ್ಣ ಪುಟ್ಟ ಬದಲಾವಣೆಗಳು ಆಗುವ ಟ್ರಿಕ್ಸ್ ಕಲಿಯಬೇಕು ಅಷ್ಟೇ.

ಎಲ್ಲಾ ಪ್ರಶ್ನೋತ್ತರಗಳಿಗೆ ಸ್ವಂತ ವಾಕ್ಯಗಳನ್ನು ಬಳಸಿ ಉತ್ತರ ಬರೆಯಬಹುದು. ಮೊದಲ ಪದ್ಯದ ಸಮ್ಮರಿ ಕಲಿಯಲೇ ಬೇಕು. ಇದನ್ನು ಕೂಡ ಸ್ವಂತ ವಾಕ್ಯದಲ್ಲಿ ಬರೆಯಬಹುದು. ಆದರೆ ಪ್ಯಾರಾಗ್ರಾಫ್ ಉತ್ತರಗಳನ್ನು ನಿರೀಕ್ಷಿಸಲಾಗುತ್ತದೆ. ಪಾಯಿಂಟ್ ಉತ್ತರಗಳು ಎಕ್ಸ್‌ಟ್ರ್ಯಾಕ್ಸ್ ಪ್ರಶ್ನೆಗಳಿಗೆ ಮತ್ತು ಮೊದಲ 16 ಗ್ರಾಮರ್ ಪ್ರಶ್ನೆಗಳಿಗೆ ಮಾತ್ರ ಬರೆಯಬೇಕಾಗುತ್ತದೆ.

ಅಂಕಗಳನ್ನು ನೋಡಿಕೊಂಡು ಉತ್ತರಿಸಬೇಕಾದದ್ದು ಅಗತ್ಯ. ಪ್ರೊಫೈಲ್ ಬರಹ, ಕಥಾ ವಿಸ್ತರಣೆ, ಚಿತ್ರ ನೋಡಿ ವಿಶ್ಲೇಷಣೆ ಬರೆಯುವುದು, ಪ್ರಬಂಧ, ಪತ್ರ ಲೇಖನ ಇವೆಲ್ಲಾ ಓದದೆ ಇಂಗ್ಲಿಷ್ ಭಾಷೆ ಬಂದರೆ ಸಾಕು ಬರೆದು ಪಾಸಾಗಲು. ಅಲ್ಲಿ ಏಳನೇ ಅಥವಾ ಎರಡನೇ ಪದ್ಯವನ್ನು ಪೂರ್ತಿಯಾಗಿ ಬಾಯಿಪಾಠ ಬರೆಯಲು ಕಲಿತಿರಬೇಕು. ಎಲ್ಲಕ್ಕಿಂತ ದೊಡ್ಡ ಪಾಠ ಡಿಸ್ಕವರಿ. ಅದರ ಎಕ್ಸ್‌ಟ್ರ್ಯಾಕ್ಟ್ ಮಾತ್ರ ಕಲಿತರೆ ಸಾಕು.

ಇಷ್ಟನ್ನು ತಯಾರಿ ಮಾಡಿ ಕಲಿತು, ಇದುವರೆಗೆ ಸಿಕ್ಕಿದ 3 ಪ್ರಿಪರೇಟರಿ ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಮತ್ತು ಇಲಾಖೆಯಿಂದ ಬಂದ ನಾಲ್ಕು ಮಾದರಿ ಪ್ರಶ್ನಾ ಪತ್ರಿಕೆಗಳು, ಒಟ್ಟಾಗಿ ಏಳು ಪ್ರಶ್ನಾ ಪತ್ರಿಕೆಗಳಲ್ಲಿ ಇರುವ ಎಲ್ಲಾ ಪ್ರಶ್ನೋತ್ತರಗಳನ್ನು ಕಲಿತರೆ ದ್ವಿತೀಯ ಭಾಷೆಯಾದ ಆಂಗ್ಲ ಭಾಷೆಯಲ್ಲಿ ಖಂಡಿತವಾಗಿಯೂ ಶೇಕಡಾ 90ಕ್ಕಿಂತ ಹೆಚ್ಚು ಅಂಕ ಪಡೆದು ಡಿಸ್ಟಿಂಕ್ಷನ್ ಅಂಕಗಳನ್ನು ಗಳಿಸುವಲ್ಲಿ ಸಂದೇಹವೇ ಇಲ್ಲ.

ಬರವಣಿಗೆಯಲ್ಲಿ ಸ್ವಲ್ಪ ಸ್ವಂತಿಕೆಯೂ ಸೇರಿರಲಿ. ಎಲ್ಲಾ ಉರು ಹೊಡೆಸಿ ಬರೆಯಿಸಲು ಈ ಪರೀಕ್ಷೆಯಲ್ಲಿ ಸಾಧ್ಯವಿಲ್ಲ. ಏಕೆಂದರೆ ಗ್ರಾಮರ್ ಗಣಿತದಂತೆ. ಅದಕ್ಕೊಂದು ರೂಲ್ ಇದೆ. ಅದನ್ನು ಪಾಲಿಸಲೇ ಬೇಕು. ಒಂದು ವಾಕ್ಯದ ಹಾಗೆ ಇನ್ನೊಂದು ವಾಕ್ಯ ಇರದು. ಆದರೆ ಒಂದೇ ಗ್ರಾಮರ್ ನಿಯಮವನ್ನು ಎಲ್ಲಾ ವಾಕ್ಯಗಳು ಕೂಡಾ ಫಾಲೋ ಮಾಡುತ್ತವೆ ಎಂಬುದನ್ನು ನೆನಪಿನಲ್ಲಿ ಇಟ್ಟಿರಬೇಕು. ಆಗ ಕೊಟ್ಟ ಪದ ವರ್ಬ್ ರೂಪದಲ್ಲಿ ಆದರೂ, ನೌನ್ ರೂಪದಲ್ಲಿ ಆದರೂ ತಮ್ಮದೇ ಸ್ವಂತ ವಾಕ್ಯಗಳನ್ನು ಮಾಡಬಹುದು. ನೌನ್ ಆದರೆ ಆ ಪದ ಮೊದಲಿಗೆ ಬರಬೇಕು. ವರ್ಬ್ ಆಗಿದ್ದರೆ ಎರಡನೆಯದಾಗಿ ಬರಬೇಕು ಎಂಬುದನ್ನು ಸರಳವಾಗಿ ತಲೆಯಲ್ಲಿ ಇಟ್ಟುಕೊಂಡಿರಬೇಕು.

ಆಂಗ್ಲರಿಗೆ ಕನ್ನಡ ಕಬ್ಬಿಣದ ಕಡಲೆಯೇ ಹೊರತು ಕನ್ನಡಿಗರು ಎಲ್ಲಾ ಭಾಷೆಗಳನ್ನು ಕಲಿಯುವುದರಲ್ಲಿ ನಿಸ್ಸೀಮರು. ಹಾಗಾಗಿ ಯಾರೆಲ್ಲಾ ಅಲ್ಲ, ಸ್ವಲ್ಪ ಆಂಗ್ಲ ಭಾಷೆ ಅರ್ಥ ಆಗಿ, ಇಂಟರ್ ನ್ಯಾಷನಲ್ ಭಾಷೆಯಲ್ಲಿ ಪರೀಕ್ಷೆ ಬರೆಯುವ ನೀವೆಲ್ಲರೂ ಗ್ರೇಟ್ ಅಲ್ಲದೆ ಮತ್ತಿನೇನು? ಅಲ್ವಾ? ನೀವೇನಂತೀರಿ? ಎಲ್ಲಾ ವಿದ್ಯಾರ್ಥಿಗಳಿಗೂ ಶುಭವಾಗಲಿ..


**- ಪ್ರೇಮಾ ಆರ್ ಶೆಟ್ಟಿ**, ಮೂಲ್ಕಿ




# ಮಕ್ಕಳ ಬಗ್ಗೆ ನಿಗಾ ವಹಿಸಿ, ಜಾಗೃತಿ ಮೂಡಿಸಿ

ಹೆಣ್ಣು, ಹೊನ್ನು, ಮಣ್ಣು ಮಾಯೆ ಎಂಬ ಈ ಮೂರರಲ್ಲಿ ಯಾವುದು ಮೇಲೆಂದರೆ ಉತ್ತರ ಹೇಳಲು ಸ್ವಲ್ಪ ಕಷ್ಟವೇ ಸರಿ. ಪುರಾಣ, ಇತಿಹಾಸ, ದೇವರುಗಳು ಅರಸರ ಕಾಲದಿಂದಲೂ ಓದುವಾಗ ಅರಿವಿಗೆ ಬರುವುದು ಹೆಣ್ಣು, ಮಣ್ಣಿಗಾಗಿಯೇ ಅನೇಕ ಹೋರಾಟಗಳು. ಆಕೆಯ ಸೌಂದರ್ಯವೇ ಆಕೆಗೆ ಸಾವಾಗಿ ಕಾಡಿತೋ ಏನೋ ಅನಿಸುತ್ತದೆ. ಒಂದು ಹಣೆಬರಹ, ಇನ್ನೊಂದು ಅತಿಯಾದ ಮೋಹದ ಮಾಯೆ. ಇಂದ್ರಿಯ ನಿಗ್ರಹದ ಕೊರತೆ, ಮತ್ತಷ್ಟು ಗಳಿಸಬೇಕೆಂಬಾಸೆ. ಇತ್ತೀಚೆಗಂತೂ ಪರಸ್ಪರ ಉಸಿರು ನಿಲ್ಲಿಸಲೂ ಹೇಸದ ಮಟ್ಟಿಗೆ ಬಂದು ನಿಂತಿದೆ. ಆ ಭಗವಂತನೇ ಬುದ್ಧಿ ಕೊಡಬೇಕಷ್ಟೆ. ಐಶ್ವರ್ಯ, ಹೆಣ್ಣು, ಆಹಾರ ಅನುಭವಿಸಿ ತೃಪ್ತರಾದವರಿಲ್ಲವಂತೆ ಈ ಜಗದಿ, ಹಾಗಾದವರೆಲ್ಲ ಮಸಣ ಸೇರುವುದೇ ನಿಶ್ಚಿತ, ವರ್ತಮಾನ ಭವಿಷ್ಯತ್ತಿನಲ್ಲೂ ಈ ಮಾಯೆಯೆಂಬ ಕರಿಮೋಡ ಮುಸುಕಿ ಚಿತೆಯೇರುವರು ಶ್ರೇಷ್ಠ ಚಾಣಾಕ್ಷ ಚಾಣಕ್ಯ ಒಂದೆಡೆ ಬರೆದ ಉಲ್ಲೇಖದ ನುಡಿಗಳಿವು. ಹೌದಲ್ವೇ? ನಾವು ಈ ವರ್ತಮಾನದಲ್ಲಿ ಇಂತಹ ವಾರ್ತೆಯನ್ನು ಓದುವುದು, ಕೇಳುವುದು ಇದೆ. ಕೆಲವೊಂದು ಸಲ ನಮ್ಮ ಪರಿಸರದಲ್ಲಿ ಕಣ್ಣಿಗೆ ಬೀಳ್ತದೆ. ಅಂತರ್ಜಾಲ ನೋಡಲು ಹೋದರೆ ದಿನನಿತ್ಯ ಇದೇ ಸುದ್ದಿಗಳು. ದಯವಿಟ್ಟು ಸಮಾಜದಲ್ಲಿ ಉತ್ತಮರ ಸಹವಾಸ, ಗೆಳೆತನ ಮಾಡಿ, ತೃಪ್ತಿಯಿಂದ ಇರಿ. ವೇದಿಕೆ ಸಿಗುತ್ತದೆ, ಹೆಸರು ಪ್ರಶಸ್ತಿ ಸಿಗುತ್ತದೆ ಎಂದು ಭಾವಿಸಿ ಸರಿಯಾಗಿ ವಿಮರ್ಶಿಸದೆ ಯಾರ ಸ್ನೇಹವೂ ಬೇಡ. ಪ್ರಸಿದ್ಧಿಯಾದಷ್ಟೇ ಬೇಗ ನೆಲಕಚ್ಚಬಹುದು. ಆಗ ಕೈ ಕೈ ಹಿಸುಕಿದರೆ ಪ್ರಯೋಜನವಿಲ್ಲ. ಅತಿಯಾದ ಆಸೆ, ಆಕಾಂಕ್ಷೆಗಳಿಗೆ ದೃಢತೆ ಎಂಬುದಿಲ್ಲ, ಅದು ದೂರದ ಬೆಟ್ಟ ನುಣ್ಣಗೆ ಕಂಡಂತೆ. ದುರ್ನಡತೆ, ಕುಟಿಲತೆ, ಕೆಟ್ಟ ದೃಷ್ಟಿ, ಕಳ್ಳ ಖದೀಮರ ಬಲೆಗೆ ಬಿದ್ದರೆ ಜೇಡರ ಬಲೆಯೊಳಗೆ ಸಿಲುಕಿದಂತೆ ಒದ್ದಾಟ, ಗುದ್ದಾಟ ನಡೆಸಿ ಉಸಿರನ್ನೇ ಚೆಲ್ಲಬೇಕಾಗಬಹುದು. ಮೂರ್ಖರ ಸಂಗ ಬೇಡ. ಬೇಗನೆ ಹೆಸರು ಗಳಿಸಬೇಕೆಂಬ ಆತುರವೂ ಬೇಡ. ಹಾಗಿದೆ, ಹೀಗಿದೆಯೆಂದು ಪ್ರತಿನಿತ್ಯ ಅಂತರ್ಜಾಲದಲ್ಲಿ ಭಾವಚಿತ್ರ ಹಾಕುವವರ ಬಗ್ಗೆ ಎಚ್ಚರವಿರಲಿ. ಹುಲ್ಲು ಹಗುರವಾಗಿದೆಯೆಂದು ತಲೆಮೇಲೆ ಹೊತ್ತುಕೊಂಡು ಮೆರೆಯಲಾಗದು, ಅದರ ಸ್ಥಾನ ನಮಗೆ ಗೊತ್ತಿರಬೇಕು. ತಿಳಿದೂ ತಿಳಿದೂ ರಾತ್ರಿ ಕಂಡ ಬಾವಿಗೆ ಹಗಲು ಹಾರಬಾರದು. ಸಿಂಹದ ಗುಹೆಯೊಳಗೆ ಹೊಕ್ಕರೆ ಕಥೆ ಏನಾಗಬಹುದೆಂಬ ಕಲ್ಪನೆ ಬೇಕು. ಕ್ಷಣಿಕ ಸುಖಕ್ಕೆ ಬಲಿಯಾಗದಿರಿ. ಭಗವಂತನ ಕೊಡುಗೆ ಈ ಮನುಷ್ಯ ಜನ್ಮ. ಅವನೇ ಕರೆಸಿಕೊಳ್ಳಬೇಕು, ಅಷ್ಟರವರೆಗೆ ಜೀವ, ಜೀವನ ಎರಡೂ ಅಮೂಲ್ಯವಾದ್ದು. ವಿಷಯಾಸಕ್ತರಾಗದೆ ಬದುಕೋಣ. ವಾಸ್ತವತೆಯನ್ನು ಅರಿತು ಮುಂದಡಿಯಿಡೋಣ. ಮುತ್ತುಗದ ಹೂವು ಎಂದೂ ಸಂಪಿಗೆಯಾಗಲು ಸಾಧ್ಯವಿಲ್ಲ. ಈ ವ್ಯವಸ್ಥೆಗಳೆಲ್ಲ ಎಲ್ಲಿಗೆ ಹೋಗಿ ತಲುಪಬಹುದೆಂಬ ಚಿಂತೆಯಲ್ಲಿ ಕಾಲಹರಣ ಮಾಡದೆ, ಬಂಧುಗಳೇ, ಗುರು ಹಿರಿಯರೇ ತಮ್ಮ ಮನೆಯ ಮಕ್ಕಳ ಬಗ್ಗೆ ನಿಗಾ ವಹಿಸಿ, ಜಾಗೃತಿ ಮೂಡಿಸಿ. ಇಲ್ಲದಿದ್ದಲ್ಲಿ ಇರುವ ಒಂದೆರಡು ಸಂತಾನಗಳೂ ಇಲ್ಲದಾಗಿ, ವಂಶವೇ ಅಳಿಸಿಹೋಗಬಹುದು.


**- ರತ್ನಾ ಕೆ ಭಟ್** ತಲಂಜೇರಿ



# ವಾದ

ಅವನು ವಾದವನ್ನು ನಿಲ್ಲಿಸುತ್ತಿರಲಿಲ್ಲ. ಯಾರೆಷ್ಟೇ ಹೇಳಿದ್ರು ಅವನಿಗೆ ಅವನು ಹೇಳಿದ್ದೆ ಸತ್ಯ, ಇಲ್ಲಿ ಯಾರೂ ಅವಕಾಶವನ್ನ ಕೊಡುವುದಿಲ್ಲ, ನಾವೆಷ್ಟೇ ಪ್ರಯತ್ನ ಪಟ್ಟರು ಯಾರು ಕೈ ಹಿಡಿದು ಮೇಲೆತ್ತೋದಿಲ್ಲ ನಮ್ಮ ಬದುಕನ್ನ ನಾವೇ ಕಟ್ಟಿಕೊಳ್ಳಬೇಕು, ನಮ್ಮ ಪ್ರತಿಭೆಗಳನ್ನು ಗುರುತಿಸಿ ವೇದಿಕೆ ಕೊಟ್ಟು ನಮ್ಮನ್ನ ಎತ್ತರಕ್ಕೇರಿಸುವ ಆಲೋಚನೆಗಳು ಯಾರದ್ದೂ ಇಲ್ಲ. ಇಂತಹ ಜಗತ್ತಲ್ಲಿ ಬದುಕಿ ಮಾಡೋದಕ್ಕಾದರೂ ಏನು? ಭಾಷಣದಲ್ಲಿ ಹೇಳೋದು ಸುಲಭ. ಮೊದಲು ಅವರು ಜೀವನದಲ್ಲಿ ಬದುಕಿ ತೋರಿಸಲಿ. ಅವಕಾಶ ಕೈ ತಪ್ಪಿದಾಗ, ಬಹುಮಾನಗಳು ಸಿಗದೇ ಇದ್ದಾಗ ಇದೇ ಮಾತುಗಳನ್ನು ಸಚಿನ್ ಹೇಳುತ್ತಾನೆ ಇದ್ದ. ಪ್ರತೀ ಸಲವೂ ಅಪ್ಪ ಅದನ್ನ ಕೇಳಿ ಹೇಳುತ್ತಿದ್ದದ್ದು ಒಂದೇ ಮಾತು ಮಗು ನಿನಗೆ ಎಷ್ಟು ಹೇಳಿದರು ಅರ್ಥ ಆಗೋದಿಲ್ಲ ದೀಪಾ ಆರಿದೆ ಅಂತಂದ್ರೆ ಪ್ರತಿಸಲನೂ ಗಾಳಿಯೇ ಕಾರಣವಾಗಬೇಕಿಲ್ಲ ಸುರಿದ ಎಣ್ಣೆಯು ಖಾಲಿಯಾಗಿ ಬಿಟ್ಟರೆ ದೀಪ ಆರಿ ಹೋಗಬಹುದು. ನಿನ್ನೊಳಗಿನ ಪ್ರತಿಭೆ ಜ್ಞಾನ ಪರಿಶ್ರಮದ ಎಣ್ಣೆ ಖಾಲಿಯಾಗಿದೆಯೋ ಅಥವಾ ಮೋಸದ ಗಾಳಿ ಬೀಸುತ್ತಿದಯೋ ನೋಡು ಅಂತ ಮಗನಿಗೆ ಕೇಳುವಾಗ ಹೌದೆನಿಸಿದರು ಮೊಂಡುವಾದ ನಿಲ್ಲಲೇ ಇಲ್ಲ.

**- ಧೀರಜ್** ಬೆಳ್ಳಾರೆ



## ಸ್ಥಗಿತಗೊಂಡ ಏತನೀರಾವರಿ ಘಟಕಗಳ ಪರಿಶೀಲನೆ

» ಮೊದಲನೇ ಪುಟದಿಂದ

ಯಗಚಿ ನದಿ, ವಾಟೆಹೊಳೆ ಜಲಾಶಯಗಳ ನೀರನ್ನು ಆಶ್ರಯಿಸಿಕೊಂಡು ಆಲೂರು ಮತ್ತು ಹಾಸನ ತಾಲ್ಲೂಕಿನ ಕೆಲ ಭಾಗಗಳ ನೂರಾರು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಬೇಕಾದ ಉಪ್ಪನಹಳ್ಳಿ ಮತ್ತು ಬಸವನಪುರ ಏತನೀರಾವರಿ ಘಟಕಗಳು ನಿರ್ವಹಣೆ ಕೊರತೆಯಿಂದ ಶಿಥಿಲಾವಸ್ಥೆ ತಲುಪಿವೆ.

ಈ ಹಿಂದೆ ಕೋಟ್ಯಾಂತರ ರೂ. ವೆಚ್ಚ ಮಾಡಿ ಸ್ಥಾಪನೆ ಮಾಡಿದ್ದ ಏತನೀರಾವರಿ ಘಟಕಗಳು ನಿರುಪಯುಕ್ತವಾಗಿ ಬಿದ್ದಿರುವ ಬಗ್ಗೆ ರೈತರು ಜನಪ್ರತಿನಿಧಿಗಳು, ಅಧಿಕಾರಿಗಳ ಗಮನ ಸೆಳೆದಿದ್ದರಿಂದ ಶಾಸಕ ಸಿಮೆಂಟ್ ಮಂಜು ಅವರು ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ) ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.

ಪರಿಶೀಲನೆ ವೇಳೆ ಕೆಟ್ಟು ಹೋದ ಮೋಟರ್ ಪಂಪ್, ಕಡಿತಗೊಂಡ ವಿದ್ಯುತ್ ಸಂಪರ್ಕ, ತುಕ್ಕು ಹಿಡಿದ ಪೈಪ್‌ಗಳು, ಹೂಳು ತುಂಬಿದ ಹೊಂಡ, ಕಾಲುವೆ ಕಂಡು ಅಸಮಾಧಾನ ವ್ಯಕ್ತಪಡಿಸಿದ ಶಾಸಕರು, ಶೀಘ್ರದಲ್ಲೇ ಏತನೀರಾವರಿ ಘಟಕವನ್ನು ಸರಿಪಡಿಸಿ ಚಾಲನೆ ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚನೆ ನೀಡಿದರು.

# ಖಮೇನಿ ಸಾವಿಗೆ ಸಂತಾಪ ಸೂಚಿಸದ ಮೋದಿ

## ದೇಶದ ಸ್ಥಾನಮಾನ ಜಾಗತಿಕವಾಗಿ ಕುಗ್ಗುತ್ತಿದೆ | ಕಾಂಗ್ರೆಸ್ ಆಕ್ರೋಶ

• ಪ್ರಜೋದಯ ವರದಿ

**ನವದೆಹಲಿ:** ಇಸ್ರೇಲ್ ಹಾಗು ಅಮೇರಿಕಾ ಜಂಟಿಯಾಗಿ ನಡೆಸಿದ ವೈಮಾನಿಕ ದಾಳಿಯಲ್ಲಿ ಹತರಾದ ಇರಾನ್‌ನ ಸರ್ವೋಚ್ಚ ನಾಯಕ ಆಯಾತೊಲ್ಲಾ ಅಲಿ ಖಮೇನಿ ಅವರ ನಿಧನಕ್ಕೆ ಪ್ರಧಾನಿ ನರೇಂದ್ರ ಮೋದಿ ಸಂತಾಪ ಸೂಚಿಸದೇ ಇರಲು ಕಾರಣವೇನೆಂದು ಕಾಂಗ್ರೆಸ್ ಪ್ರಶ್ನಿಸಿದೆ.





ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಸೇರಿ ಅನೇಕರು ಈ ಕುರಿತು ಪ್ರಶ್ನೆಗಳನ್ನು ಮುಂದಿಟ್ಟಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವ ಶ್ರೇಣಿಯನ್ನು ವ್ಯಾಖ್ಯಾನಿಸುವ ಮಾರ್ಗವಾಗಿ ಒಂದು ರಾಷ್ಟ್ರದ ಮುಖ್ಯಸ್ಥರ ಹತ್ಯೆಯನ್ನು ಬೆಂಬಲಿಸುತ್ತಾರೆಯೇ ಎಂದು ರಾಹುಲ್ ಗಾಂಧಿ ಕುಟುಕಿದ್ದಾರೆ.

ಇರಾನ್ ಮೇಲಿನ ಏಕಪಕ್ಷೀಯ ದಾಳಿ ಹಾಗು ಇತರ ಮಧ್ಯಪ್ರಾಚ್ಯ ರಾಷ್ಟ್ರಗಳ ಮೇಲಿನ ಇರಾನ್‌ನ ದಾಳಿಗಳನ್ನು ಖಂಡಿಸಬೇಕು. ಪ್ರಧಾನಿ ಮೌನವು ಈಗ ವಿಶ್ವದಲ್ಲಿ ಭಾರತದ ಸ್ಥಾನ ಮಾನವನ್ನು ಕುಗ್ಗಿಸುತ್ತಿದೆ ಎಂದು ರಾಹುಲ್ ಎಕ್ಸ್ ಪೋಸ್ಟ್‌ನಲ್ಲಿ ಕಿಡಿಕಾರಿದ್ದಾರೆ.

ಇದು ಅಮೇರಿಕಾ, ಇಸ್ರೇಲ್ ಮತ್ತು ಇರಾನ್ ನಡುವೆ ಹೆಚ್ಚುತ್ತಿರುವ ಹಗೆತನವು ದುರ್ಬಲ ಪ್ರದೇಶವನ್ನು ವ್ಯಾಪಕ ಸಂಘರ್ಷದತ್ತ ತಳ್ಳುತ್ತಿದೆ. ಸುಮಾರು ಒಂದು ಕೋಟಿ ಭಾರತೀಯರು ಸೇರಿ ಕೋಟ್ಯಾಂತರ ಜನರು ಅನಿಶ್ಚಿತತೆಯನ್ನು ಎದುರಿಸುತ್ತಿದ್ದಾರೆ. ಯಾವುದೇ ಪ್ರದೇಶದ ಸಾರ್ವಭೌಮತ್ವವನ್ನು ಉಲ್ಲಂಘಿಸಿ ನಡೆಸುವ ದಾಳಿಗಳು ಬಿಕ್ಕಟ್ಟನ್ನು ಇನ್ನಷ್ಟು ಹದಗೆಡಿಸುತ್ತವೆ. ಇರಾನ್ ಮೇಲಿನ ಏಕಪಕ್ಷೀಯ ದಾಳಿಗಳು ಮತ್ತು ಪಶ್ಚಿಮ ಏಷ್ಯಾದ ಇತರ ರಾಷ್ಟ್ರಗಳ ಮೇಲಿನ ಇರಾನ್‌ನ ದಾಳಿಗಳನ್ನು ಖಂಡಿಸಬೇಕು. ಹಿಂಸಾಚಾರವು ಹಿಂಸಾಚಾರಕ್ಕೇ ಕಾರಣವಾಗುತ್ತದೆ. ಮಾತುಕತೆ ಮತ್ತು ಸಂಯಮವು ಶಾಂತಿಗೆ ಏಕೈಕ ಮಾರ್ಗವಾಗಿ ಉಳಿದಿದೆಯೆಂದು ರಾಹುಲ್ ಹೇಳಿದ್ದಾರೆ.

ಭಾರತವು ನೈತಿಕವಾಗಿ ಸ್ಪಷ್ಟವಾಗಿರಬೇಕು. ಅಂತರ್ರಾಷ್ಟ್ರೀಯ ಕಾನೂನು ಮತ್ತು ಮಾನವ ಜೀವಗಳ ರಕ್ಷಣೆಯಲ್ಲಿ ನಾವು ಸ್ಪಷ್ಟವಾಗಿ ಮಾತನಾಡುವ ಧೈರ್ಯವನ್ನು ಹೊಂದಿರಬೇಕು. ನಮ್ಮ ವಿದೇಶಾಂಗ ನೀತಿಯು ಸಾರ್ವಭೌಮತ್ವ ಮತ್ತು ವಿವಾದಗಳ ಶಾಂತಿಯುತ ಪರಿಹಾರದಲ್ಲಿ ಬೇರೂರಿದೆ.ಅದು ಸ್ಥಿರವಾಗಿರಬೇಕೆಂದಿದ್ದಾರೆ.

**ಮೌನ ಆತಂಕ ತರಿಸಿದೆ**

ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಪ್ರತಿಕ್ರಿಯಿಸಿ, ಈ ವಿಷಯದಲ್ಲಿ ಸರ್ಕಾರದ ಆತಂಕಕಾರಿ ಮೌನದ ಕುರಿತು ಬಜೆಟ್ ಅಧಿವೇಶದನ 2ನೇ ಅವಧಿಯಲ್ಲಿ ಮುಕ್ತವಾಗಿ ಚರ್ಚಿಸಬೇಕೆಂದು ಆಗ್ರಹಿಸಿದ್ದಾರೆ.

ಸರ್ಕಾರದ ಈ ನಡೆಯು ತಟಸ್ಥ ಧೋರಣೆಯಲ್ಲ, ಬದಲಿಗೆ ತಿರಸ್ಕಾರವಾಗಿದೆ. ಇದು ಭಾರತದ ವಿದೇಶಾಂಗ ನೀತಿಯ ದಿಕ್ಕು ಹಾಗು ವಿಶ್ವಾಸಾರ್ಹತೆಯ ಬಗ್ಗೆ ಗಂಭೀರ ಸಂಶಯಗಳನ್ನು ಮೂಡಿಸಿದೆ. ಸಂಧಾನ ಮಾತುಕತೆಗಳು ನಡೆಯುತ್ತಿರುವ ಮಧ್ಯೆಯೇ ಸಾರ್ವಭೌಮ ದೇಶದ ಮುಖ್ಯಸ್ಥರೊಬ್ಬರ ಹತ್ಯೆಯು ಸಮಕಾಲೀನ ಅಂತಾರಾಷ್ಟ್ರೀಯ ಸಂಬಂಧಗಳಲ್ಲಿನ ಗಂಭೀರ ಬಿರುಕನ್ನು ಸೂಚಿಸುತ್ತದೆ. ಈ ಹತ್ಯೆಯನ್ನು ಖಂಡಿಸುವುದರಿಂದ ಭಾರತ ಸರ್ಕಾರ ದೂರ ಉಳಿದಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಆರಂಭದಲ್ಲಿ, ಅಮೇರಿಕಾ-ಇಸ್ರೇಲ್ ನಡೆಸಿದ ಬೃಹತ್ ದಾಳಿಯನ್ನು ನಿರ್ಲಕ್ಷಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಅದಕ್ಕೂ ಮೊದಲು ನಡೆದ ಘಟನೆಗಳ ಸರಮಾಲೆಯನ್ನು ಪ್ರಸ್ತಾಪಿಸದೆ ಕೇವಲ ಯುಎಇ ಮೇಲಿನ ಇರಾನ್‌ನ ಪ್ರತೀಕಾರದ ದಾಳಿಯನ್ನು ಖಂಡಿಸುವುದಕ್ಕೆ ಸೀಮಿತರಾದರೆಂದು ಕಿಡಿಕಾರಿದ್ದಾರೆ.

ವಿದೇಶಿ ನಾಯಕರೊಬ್ಬರ ಉದ್ದೇಶಿತ ಹತ್ಯೆಯ ಸಂದರ್ಭದಲ್ಲಿ ನಮ್ಮ ದೇಶವು ಅಂತರ್ರಾಷ್ಟ್ರೀಯ ಕಾನೂನಿನ ರಕ್ಷಣೆಗೆ ನಿಲ್ಲದಿದ್ದಾಗ ಅದು ನಮ್ಮ ವಿದೇಶಾಂಗ ನೀತಿಯ ಬಗ್ಗೆ ಗಂಭೀರ ಅನುಮಾನಗಳನ್ನು ಹುಟ್ಟುಹಾಕುತ್ತದೆಂದು ಅವರು ಪ್ರತಿಪಾದಿಸಿದ್ದಾರೆ.

## ಪುಷ್ಪಾಲಂಕೃತ ಲಕ್ಷ್ಮೀ ನರಸಿಂಹಸ್ವಾಮಿ ರಥೋತ್ಸವ

» ಮೊದಲನೇ ಪುಟದಿಂದ

ಸಭೆಯಲ್ಲಿ ಕೈಗೊಂಡಿದ್ದ ನಿರ್ಣಯವನ್ನು ಬದಲಿಸಿತು. ಅಧಿಕಾರಿಗಳು ವಸ್ತ್ರಹಾಕಿ ಪುನ: ತೆಗೆಸಿದ್ದು ಅವರೇ. ಈ ಬಗ್ಗೆ ಅಧಿಕಾರಿಗಳೊಂದಿಗೆ ಮಾತನಾಡಿದ್ದೆ. ದೇವರ ವಿಚಾರದಲ್ಲಿ ಯಾರ್‍ಯಾರು ಅಪಪ್ರಚಾರ ಮಾಡಿದರೋ ಅವರನ್ನು ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ನೋಡಿ ಕೊಳ್ಳು ತ್ತಾನೆ. ಗೊಂದಲದಿಂದ ರಥೋತ್ಸವ ನಿಲ್ಲಬಾರದೆಂದು ಸುಮ್ಮನಿದ್ದೇ ನೆಂದರು.

ಕಳೆದ 30 ವರ್ಷಗಳಿಂದ ನಾನೇ ಪ್ರಸಾದ ವ್ಯವಸ್ಥೆ ಮಾಡುತ್ತಿದ್ದೆ. ಅದಕ್ಕೆ ಕೆಲವರು ಅಡ್ಡಿಪಡಿಸಿದರು. 800 ವರ್ಷಗಳ ಇತಿಹಾಸ ಹೊಂದಿರುವ ದೇವಸ್ಥಾನಕ್ಕೆ ಕೆಟ್ಟ ಹೆಸರು ಬರಬಾರದೆಂಬುದು ನಮ್ಮ ಅಭಿಲಾಷೆ. ಈ ಸಂಬಂಧ ಜಿಲ್ಲಾಧಿಕಾರಿ ಜೊತೆಗೆ ಮಾತನಾಡಿದ್ದೇನೆ. ಇಲ್ಲಿ ಏನೇನು ನಡೆಯಿತು ಎಂಬುದನ್ನು ಸಮಯ ಬಂದಾಗ ವಿವರಿಸುತ್ತೇನೆಂದರು.

**ಅಧಿಕಾರಿಗಳಿಗೆ ಸಂಪೂರ್ಣ ಸಹಕಾರ**

ಸಂಸದ ಶ್ರೇಯಸ್ ಪಟೇಲ್ ಅವರು ಮಾತನಾಡಿ, ವೈಯಕ್ತಿಕ ಹಿತಾಸಕ್ತಿಗಾಗಿ ಧಾರ್ಮಿಕ ಆಚರಣೆ ಹಾಗು ಜನರ ನಂಬಿಕೆಗೆ ಧಕ್ಕೆ ತರುವುದು ಬೇಡವೆಂದು ಅಧಿಕಾರಿಗಳಿಗೆ ಮೊದಲೇ ಹೇಳಿದ್ದೆ. ಸಂಭ್ರಮದಿಂದ ನಡೆಯಬೇಕಿದ್ದ ಜಾತ್ರೆಯನ್ನು ಗೊಂದಲದ ಗೂಡಾಗಿಸಬಾರದೆಂದು ಅಧಿಕಾರಿಗಳಿಗೆ ಎಲ್ಲಾ ರೀತಿಯಿಂದ ಸಹಕಾರ ನೀಡಿದ್ದೇವೆ. ದೇವಾಲಯ ಮುಜುರಾಯಿ ಇಲಾಖೆಗೆ ಸೇರಿರುವುದರಿಂದ ಅಧಿಕಾರಿಗಳೇ ಹೂವಿನ ಅಲಂಕಾರ ಮಾಡಿದ್ದಾರೆಂದರು.

**ಸಂಸದರ ಹಿತಾಸಕ್ತಿಯಿಂದ ಸಮಸ್ಯೆ**

ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಅವರು ಮಾತನಾಡಿ, ತಾಲ್ಲೂಕು ಆಡಳಿತ ನಡೆಸಿದ ಪೂರ್ವಭಾವಿ ಸಭೆಯಲ್ಲಿ ರಥಕ್ಕೆ ಬಟ್ಟೆ ಹಾಕುವ ನಿರ್ಣಯ ಕೈಗೊಳ್ಳಲಾಗಿತ್ತು. ಜಿಲ್ಲಾಡಳಿತ ಬಟ್ಟೆ ತೆಗೆಯುವ ನಿರ್ಧಾರ ಏಕೆ ಕೈಗೊಂಡಿತು ಎಂದು ಗೊತ್ತಿಲ್ಲ. ಸಂಸದರ ವೈಯಕ್ತಿಕ ಹಿತಾಸಕ್ತಿಯಿಂದ ಅನಗತ್ಯ ಗೊಂದಲ ಸೃಷ್ಟಿಯಾಗಿದೆಂದು ಪ್ರತಿಕ್ರಿಯಿಸಿದರು.

ನಾಡಿನ ಎಲ್ಲರಿಗೂ ಒಳ್ಳೆಯದಾಗಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದೇನೆ. ಮಧ್ಯ ಪ್ರಾಚ್ಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದಿಂದ ಅಪಾರ ಹಾನಿ ಸಂಭವಿಸಿದೆ. ಭಾರತದ ಮೇಲೆ ಯುದ್ಧದ ಪರಿಣಾಮ ಬೀರಲಿದೆ. ವಿಶ್ವದಾದ್ಯಂತ ಶಾಂತಿ ನೆಲೆಸಲಿ, ಎಲ್ಲರೂ ಸಹೋದರರಂತೆ ಬಾಳುವಂತಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿದ್ದೇನೆಂದರು.

## ಮಾ.7-8ರಂದು ನಗರದಲ್ಲಿ ಹಕ್ಕೊತ್ತಾಯ ಜಾಥಾ

» ಮೊದಲನೇ ಪುಟದಿಂದ

ಮತ್ತೆ ಜಾರಿಯಾಗಲಿ ಎಂಬ ಉದ್ದೇಶದಿಂದ ಸಂಪನ್ಮೂಲ ವ್ಯಕ್ತಿಗಳಿಂದ ಚರ್ಚೆ ನಡೆಯಲಿದೆ. ಇದೇ ವೇಳೆ ಹಾಸನ ಮಣ್ಣಿನ ಹೆಣ್ಣು ದನಿಗಳು ಎಂಬ ಗ್ರಂಥ ಬಿಡುಗಡೆ ನೆರವೇರಲಿದೆ. ಸಂಜೆ 6 ಗಂಟೆಗೆ ಮಹಾವೀರ ವೃತ್ತದಲ್ಲಿ ಮೌನ ಜಾಗೃತಿ ಕಾರ್ಯಕ್ರಮ ಜರುಗಲಿದೆ ಎಂದು ತಿಳಿಸಿದರು.

ಮಾ.8ರಂದು ಮಹಿಳಾ ದೌರ್ಜನ, ಸವಾಲುಗಳು, ಬಿಡುಗಡೆಯ ಸಾಧ್ಯತೆಗಳು ವಿಷಯ ಕುರಿತು ವಿಚಾರ ಸಂಕಿರಣ ನಡೆಸಲಾಗುವುದು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಪ್ರೊ. ಆರ್.ಸುನಂದಮ್ಮ,ಹೈದರಾಬಾದ್‌ನ ಮೌಲಾನಾ ಆಜಾದ್ ವಿಶ್ವವಿದ್ಯಾಲಯದ ಪ್ರೊ. ಶಾಹಿದಾ, ಡಾ.ಟಿ.ಎಂ.ಉಷಾರಾಣಿ, ಜಯಲಕ್ಷ್ಮಿ ಮುನಿವೆಂಕಟೇಗೌಡ, ತಾರಾ ಎಸ್.ಸ್ವಾಮಿ, ಡಾ. ಶೈಲಜಾ ಕರ್ಕಡ, ಗೀತಾ ಕಿರಣ್ ಮತ್ತಿತರರು ಭಾಗವಹಿಸಲಿದ್ದು, ಬೇಲೂರಿನ ಸಿ.ಸೌಭಾಗ್ಯ ಅಧ್ಯಕ್ಷತೆ ವಹಿಸಲಿದ್ದಾರೆಂದರು.

ಕಾರ್ಯಕ್ರಮದ ಅಂಗವಾಗಿ ವಿವಿಧ ವಿಚಾರಗೋಷ್ಠಿ ಹಾಗು ಸಾಂಸ್ಕೃತಿಕ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಸಮಾಜದಲ್ಲಿ ಮಹಿಳೆಯರಿಗೆ ಎಲ್ಲಾ ಕ್ಷೇತ್ರದಲ್ಲೂ ಪ್ರಾತಿನಿಧ್ಯ ಸಿಗಬೇಕು, ಶೋಷಣೆ, ದಬ್ಬಾಳಿಕೆ ನಿಲ್ಲಬೇಕೆಂಬ ಸದುದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಬಿಜಿವಿಎಸ್ ಜಿಲ್ಲಾ ಸಂಚಾಲಕಿ ಮಮತಾ ಶಿವು, ಮಹಿಳಾ ಮತ್ತು ಸ್ತ್ರೀ ರೋಗ ತಜ್ಞೆ ಡಾ|| ರಂಗಲಕ್ಷ್ಮಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿವೃತ್ತ ಉಪನಿರ್ದೇಶಕಿ ಗೀತಾ, ನಿರ್ಮಲಾ, ವಿಜಯಶಾಲೆಯ ಆಡಳಿತ ಮಂಡಳಿ ನಿರ್ದೇಶಕಿ ತಾರಾ ಎಸ್.ಸ್ವಾಮಿ, ಪುಷ್ಪಾ ಇದ್ದರು.

## ಎತ್ತಿನಹೊಳೆ ಯೋಜನೆ ಟನಲ್ ಸಂತ್ರಸ್ತರಿಗೆ ಪರಿಹಾರ

• ಪ್ರಜೋದಯ ವರದಿ

**ಸಕಲೇಶಪುರ:** ಎತ್ತಿನಹೊಳೆ ಯೋಜನೆಯ ಟನಲ್‌ಕಾಮಗಾರಿ ವೇಳೆ ತಾಲ್ಲೂಕಿನ ಹೆಗ್ಗದ್ದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಾರನಹಳ್ಳಿ ಗ್ರಾಮದಲ್ಲಿ ಹಾನಿಗೊಳಗಾಗಿದ್ದ 20 ಕುಟುಂಬಗಳಿಗೆ ನೆರವಾಗುವ ಉದ್ದೇಶದಿಂದ ಶಾಸಕ ಸಿಮೆಂಟ್ ಮಂಜು ಅವರು 2 ಕೋಟಿ ರೂ. ಪರಿಹಾರ ವಿತರಣೆ ಮಾಡಿದರು.



ಪಟ್ಟಣದ ತಮ್ಮ ಗೃಹ ಕಚೇರಿಯಲ್ಲಿ ಮಂಗಳವಾರ ಚೆಕ್ ವಿತರಣೆ ಮಾಡಿ ಮಾತನಾಡಿದ ಅವರು, ತಾಲ್ಲೂಕಿನ ಮಾರನಹಳ್ಳಿ ಭಾಗದಲ್ಲಿ ಎತ್ತಿನಹೊಳೆ ಯೋಜನೆಯಡಿ ಸುರಂಗದ ಮೂಲಕ ನೀರು ಹರಿಸುವ ಕಾಮಗಾರಿ ನಡೆಯುವ ಸಂದರ್ಭದಲ್ಲಿ 20 ಮನೆಗಳಿಗೆ ಹಾನಿಯಾಗಿದೆ. ಸ್ಫೋಟದ ಪರಿಣಾಮ ಅನೇಕ ಬಡವರು ಹಾಗು ಕಾರ್ಮಿಕರ ಮನೆಗಳಿಗೆ ಭಾರೀ ಪ್ರಮಾಣದಲ್ಲಿ ಹಾನಿಯಾಗಿದ್ದು, ಕೆಲವು ಮನೆಗಳು ವಾಸಿಸಲು ಅಸಾಧ್ಯವಾಗಿವೆ. ಹಾನಿಗೊಳಗಾದ ಮನೆಗಳಿಗೆ ವೈಜ್ಞಾನಿಕ ರೀತಿಯಲ್ಲಿ ಸಮರ್ಪಕ ಪರಿಹಾರ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಲಾಗಿತ್ತು ಎಂದು ಹೇಳಿದರು.

ಅದರಿಂದ ಸರ್ಕಾರವು ಮೊದಲ ಹಂತದಲ್ಲಿ ಸುಮಾರು 2 ಕೋಟಿ ಪರಿಹಾರವನ್ನು ಮಂಜೂರು ಮಾಡಿದ್ದು, ಅದರ ಮೊದಲ ಕಂತಿನ ಚೆಕ್ ಈ ದಿನ ವಿತರಿಸಲಾಗಿದೆ. ಎತ್ತಿನಹೊಳೆ ಕಾಮ ಗಾರಿಯಿಂದ ಕೆಲವರು ಜಮೀನುಗಳನ್ನು ಕಳೆದುಕೊಂಡಿರುವುದರ ಜೊತೆಗೆ ಹಲವರ ಮನೆಗಳಿಗೆ ಹಾನಿಯಾಗಿದೆ. ಯೋಜನೆಗೆ ಸಂಬಂಧಿಸಿ ದಂತೆ ಸಣ್ಣ ರೈತರು, ಬಡವರು ಹಾಗು ಕಾರ್ಮಿಕ ವರ್ಗದವರು ತಮ್ಮ ಆಸ್ತಿಯನ್ನು ಕಳೆದುಕೊಂಡಿದ್ದಾರೆ. ಆಸ್ತಿ ಹಾಗೂ ಮನೆ ಕಳೆದುಕೊಂಡವರಿಗೂ ಮಾರುಕಟ್ಟೆ ದರದ ಆಧಾರದ ಮೇಲೆ ವೈಜ್ಞಾನಿಕ ವಾಗಿ ಪರಿಹಾರ ನೀಡಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಯೋಜನೆ ಹಾದುಹೋಗಿರುವ ಪ್ರದೇಶಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ಕಳೆದ ಎರಡು-ಮೂರು ವರ್ಷಗಳಿಂದ ಸುರಿಯುತ್ತಿರುವ ಅತಿವೃಷ್ಟಿಯಿಂದ ಮಲೆನಾಡು ಪ್ರದೇಶಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಬೇಕು. ಈ ಭಾಗ ದಲ್ಲಿ ಉಂಟಾದ ಎಲ್ಲಾ ಹಾನಿಯನ್ನು ಸರ್ಕಾರ ಸಮಗ್ರವಾಗಿ ಪರಿಶೀಲಿಸಿ, ಯಾರಿಗೂ ಅನ್ಯಾಯವಾಗದಂತೆ ಸೂಕ್ತ ಪರಿಹಾರ ಮತ್ತು ಸೌಲಭ್ಯ ಒದಗಿಸಬೇಕೆಂದು ಆಗ್ರಹಿಸಿದರು.

## ಕಸಾಯಿಖಾನೆಗೆ ಸಾಗಿಸುತ್ತಿದ್ದ 3 ರಾಸುಗಳ ರಕ್ಷಣೆ

• ಪ್ರಜೋದಯ ವರದಿ

**ಸಕಲೇಶಪುರ:** ಕಸಾಯಿ ಖಾನೆಗೆ ಸಾಗಿಸುವ ಉದ್ದೇಶದಿಂದ ಅಕ್ರಮ ವಾಗಿ ಜಾನುವಾರು ಸಾಗಿಸುತ್ತಿದ್ದ ಟಾಟಾಏಸ್ ಗೂಡ್ಸ್ ವಾಹನ ಹಾಗು ಚಾಲಕನನ್ನು ವಶಕ್ಕೆ ಪಡೆದು 3 ರಾಸುಗಳನ್ನು ರಕ್ಷಿಸಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಹೊಳೆನರಸೀಪುರ ತಾಲ್ಲೂಕು ಮಾಕವಳ್ಳಿ ಗ್ರಾಮದ ಎಂ.ಬಿ.ಚಂದನ್ ಬಂಧಿತ ಆರೋಪಿ. ಖಚಿತ ಮಾಹಿತಿ ಆಧರಿಸಿ ಪೊಲೀಸರು ಸೋಮವಾರ ಸಂಜೆ ಕೆಂಪೇಗೌಡ ಪ್ರತಿಮೆ ಬಳಿ ನಿಂತು ಮಂಗಳೂರು ಕಡೆಯಿಂದ ಹಾಸನಕ್ಕೆ ಬರುತ್ತಿದ್ದ ವಾಹನವನ್ನು ವಶಕ್ಕೆ ಪಡೆದಿದ್ದಾರೆ. ವಾಹನದಲ್ಲಿ ಎರಡು ಹಸು ಹಾಗು ಒಂದು ಹೋರಿ ಇತ್ತು. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕೈವಾರ ತಾತಯ್ಯ ಯೋಗಿ ಅಷ್ಟೇ ಅಲ್ಲ ವಿವೇಕಿಯಾಗಿದ್ದರು

• ಪ್ರಜೋದಯ ವರದಿ

**ಹಾಸನ:** ಎಲ್ಲಾ ವಿದ್ಯಾವಂತರು ವಿವೇಕಿಗಳಲ್ಲ, ಎಲ್ಲಾ ಜ್ಞಾನಿಗಳು ವಿವೇಕಿಗಳಲ್ಲ, ಬುದ್ಧಿವಂತರೆಲ್ಲ ಜ್ಞಾನಿಗಳಲ್ಲ, ಜ್ಞಾನಿಗಳೆಲ್ಲ ವಿವೇಕರಲ್ಲ, ಯಾರು ವಿವೇಕಿಯೋ ಅವನಿಗೆ ಮಾತ್ರ ಸತ್ಯಗಳು ಗೋಚರವಾಗುತ್ತದೆ ಅಂತಹ ಪಾತ್ರಕ್ಕೆ ಹೆಸರಾದವರು ಕೈವಾರ ತಾತಯ್ಯನವರು ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಹೆಚ್.ಎಲ್.ಮಲ್ಲೇಶಗೌಡ ಅವರು ತಿಳಿಸಿದರು.



ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಮಂಗಳವಾರ ನಡೆದ ಯೋಗಿ ನಾರಾಯಣ ಯಾತಿಗಳು (ಕೈವಾರ ತಾತಯ್ಯ) ಜಯಂತಿ ಉದ್ಘಾಟಿಸಿ ಮಾತನಾಡಿ, ಜಗತ್ತಿನ ಬಹುತೇಕ ಸಾಧಕರು ಮೂಲತಃ ನೋವು ಉಂಡವರು. ಅಂತಹ ತತ್ವಜ್ಞಾನಿಗಳಿಗೆ ಮಾತ್ರ ಜಗತ್ತಿನ ಸತ್ಯ ಗಳನ್ನು ತಿಳಿಯಲು ಸಾಧ್ಯ. ಸುಖದಲ್ಲಿ ಇದ್ದವರಿಗೆ ಜಗತ್ತಿನ ಸತ್ಯವನ್ನು ತಿಳಿಯಲು ಸಾಧ್ಯವಿಲ್ಲ ಎಂದರು.

ಅನೇಕ ವಿದ್ವಾಂಸರ, ಸಾಹಿತಿಕಾರರು, ತತ್ವಜ್ಞಾನಿಗಳು, ವಚನಕಾರರು, ಹುಟ್ಟಿದ ಸ್ಥಳಕ್ಕೆ ವಿಶೇಷವಾದ ಮಹಿಮೆ ಪ್ರಾಪ್ತಿವಾಗುತ್ತದೆ, ಹಾಗೇ ಯೋಗಿ ನಾರಾಯಣ ಅವರು ಹುಟ್ಟಿದ ಕೈವಾರಕ್ಕೂ ವಿಶೇಷವಾದ ಹೊಳಪು ಪ್ರಾಪ್ತಿಯಾಗಿದೆ. ತಾವುಗಳು ಹುಟ್ಟಿದ ಸ್ಥಳಕ್ಕೆ ಬೆಳಕು ತಂದು ಕೊಡುವಂತಹ ಕೆಲಸ ಮಹಾಪುರುಷರ ಸ್ವಭಾವ ಎಂದು ಹೇಳಿದರು.

ದಕ್ಷಿಣ ಭಾರತವು ನೇತ್ರಾಯುಗ ಮತ್ತು ದ್ವಾಪರ ಯುಗದಲ್ಲಿ ಜಗತ್ತಿನ ಮನುಷ್ಯರು ಬದುಕಿಗೆ ಬೇಕಾದಂತಹ ಕಟು ಸತ್ಯವನ್ನು ಪ್ರತಿಪದನೆ ಮಾಡುವಲ್ಲಿ ಅನೇಕ ಚಿಂತಕರು, ಮೇಧಾವಿಗಳು, ದಾರ್ಶನಿಕರು, ಕನ್ನಡ ನಾಡಿನ ನೆಲೆಯಲ್ಲಿ ಶ್ರೇಷ್ಠ ಕಾವ್ಯ, ಕವನ, ತತ್ವಪದ, ವಚನ, ಇತ್ಯಾದಿಗಳನ್ನು ರೂಪಿಸಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಮನೆ ಗೆದ್ದು ಮಾರು ಗೆಲ್ಲು ಎನ್ನುವುದು ನಮ್ಮ ಪೂರ್ವಿಕರ ಒಂದು ಆಲೋಚನೆ, ಯಾರು ಮನೆ ಯಲ್ಲಿ ತನ್ನ ಜವಾಬ್ದಾರಿಯನ್ನು ಸರಳ ವಾಗಿ ನಿರ್ವಹಿಸುತ್ತಾನೆ, ಅವನು ಸಮಾಜದಲ್ಲಿ ಜವಾಬ್ದಾರಿಯನ್ನು ಸರಳವಾಗಿ ನಿರ್ವಹಿಸುತ್ತಾನೆ ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಹಾಯಕರಾದ ರಮೇಶ್ ಅವರು ಮಾತನಾಡಿ, ಸಮಾಜದ ಒಳಿತೆಗಾಗಿ ಕೈವಾರ ತಾತಯ್ಯನವರು ನೀಡಿರುವ ತತ್ವಗಳನ್ನು ಅನುಸರಿಸುತ್ತಾ ಸಮಾಜವನ್ನು ಒಳ್ಳೆಯ ಮಾರ್ಗದ ಕಡೆಗೆ ತರುವ ನಿಟ್ಟಿನಲ್ಲಿ ನಾವು ಸಹ ಕೈಜೋಡಿಸೋಣ. ಕೈವಾರ ತಾತಯ್ಯ ನವರು ನೀಡಿರುವಂತಹ ಮಾರ್ಗದರ್ಶನದ ಮೂಲಕ ಯುವಕರು ಅವರ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಸಾಹಿತಿ ಎನ್.ಎಲ್.ಚನ್ನೇಗೌಡ ಅವರು ಮಾತನಾಡಿ, ಕೈವಾರ ತಾತಯ್ಯನವರು ಸಂಸಾರದ ಹೊರೆಯನ್ನು ತೊರೆದು ಸನ್ಯಾಸಿ ಪಟ್ಟವನ್ನು ಸ್ವೀಕರಿಸಿ ಸಮಾಜಕ್ಕೆ ಅನೇಕ ಆಧ್ಯಾತ್ಮಿಕ ತತ್ವಪದಗಳನ್ನು ನೀಡಿದರು. ಪ್ರಾಪಂಚಿಕ ಜ್ಞಾನವನ್ನು ಮರೆತು ಆಧ್ಯಾತ್ಮಿಕವಾಗಿ ಜೀವನವನ್ನು ರೂಪಿಸಿಕೊಳ್ಳುವುದರ ಜೊತೆಗೆ ಸಮಾಜಕ್ಕೆ ಮಾದರಿಯಾಗುವಂತಹ ಅನೇಕ ಪಿಡುಗುಗಳನ್ನು ರೂಪಿಸುವಲ್ಲಿ ಕೈವಾರ ತಾತಯ್ಯನವರ ಪಾತ್ರ ಮುಖ್ಯವಾಗಿದೆ ಎಂದರು.

ಕೈವಾರ ತಾತಯ್ಯನವರು20 ರಿಂದ 25 ತತ್ವಗಳನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ, ಇಂತಹ ಮಹನೀಯರ ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಆಧ್ಯಾತ್ಮಿಕವಾಗಿ ಬದುಕು ನಡೆಸಲು ಸುಲಭ. ಇಂತಹ ಸಾಹಿತಿಗಾರರನ್ನು, ತತ್ವಪದಕಾರರನ್ನು ನೆನೆಯುವುದು ಮತ್ತು ಇಂತಹ ಜಯಂತಿ ಆಚರಣೆ ಮಾಡುತ್ತಾ ಸಾಹಿತಿಗಳ ಬಗ್ಗೆ ತಿಳಿದುಕೊಳ್ಳುವುದು ನಮ್ಮ ಪುಣ್ಯ ಎಂದರು.

ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆ ಸಹಾಯಕ ನಿರ್ದೇಶಕರು ಹೆಚ್.ಪಿ. ತಾರಾನಾಥ್ ಉಪಸ್ಥಿತಿರಿದ್ದರು.

## ಗ್ರಹಣ : ಚನ್ನಕೇಶವಸ್ವಾಮಿ ಗರ್ಭಗುಡಿ ಬಾಗಿಲು ಬಂದ್

» ಮೊದಲನೇ ಪುಟದಿಂದ

ವಿಧದ ಪೂಜೆ, ನೈವೇದ್ಯ ಅಥವಾ ಸೇವೆಗಳು ನಡೆಯದಂತೆ ಶಿಸ್ತಿನ ಕ್ರಮಗಳನ್ನು ಅನುಸರಿಸಲಾಯಿತು. ಆದರೆ, ಗರ್ಭಗುಡಿ ಹೊರತುಪಡಿಸಿ ದೇವಾಲಯದ ಇತರೆ ಭಾಗಗಳಿಗೆ ಪ್ರವಾಸಿಗರು ಹಾಗು ಭಕ್ತರಿಗೆ ಪ್ರವೇಶ ಅವಕಾಶ ನೀಡಲಾಗಿತ್ತು. ಅವರು ಶಿಲ್ಪ ವೈಭವವನ್ನು ವೀಕ್ಷಿಸಲು ಅವಕಾಶ ಕಲ್ಪಿಸಲಾಯಿತು.


ಗ್ರಹಣ ಮುಗಿದ ಬಳಿಕ ಸಂಜೆ ಸುಮಾರು 7 ಗಂಟೆಯ ನಂತರ ದೇವಾಲಯದ ಒಳಾಂಗಣದಲ್ಲಿ ಶುದ್ಧಿ ಕಾರ್ಯಗಳು ಆರಂಭಗೊಂಡವು. ಶಾಸ್ತ್ರೋಕ್ತ ವಿಧಾನದಲ್ಲಿ ವಿಶೇಷ ಅಭಿಷೇಕ ಹಾಗು ಸಂಪ್ರೋಕ್ಷಣೆಯಂತಹ ವಿಧಿವಿಧಾನಗಳು ನೆರವೇರಿಸಲಾಯಿತು. ಈ ಕುರಿತು ಮಾಹಿತಿ ನೀಡಿದ ಪ್ರಧಾನ ಅರ್ಚಕ ಶ್ರೀನಿವಾಸ್ ಭಟ್ ಹಾಗು ನರಸಿಂಹ ಪ್ರಿಯ ಭಟ್ ಅವರು, ಗ್ರಹಣ ಮುಗಿದ ನಂತರ ದೇಗುಲದ ಒಳಾಂಗಣವನ್ನು ಸಂಪೂರ್ಣವಾಗಿ ಸ್ವಚ್ಛಗೊಳಿಸಿ ಪುಣ್ಯ ಕಾರ್ಯಗಳನ್ನು ನೆರವೇರಿಸಲಾಯಿತ್ತು. ಶುದ್ಧಿ ಕಾರ್ಯಗಳು ಪೂರ್ಣಗೊಂಡ ಬಳಿಕ ಬುಧವಾರ ಬೆಳಿಗ್ಗೆಯಿಂದ ಭಕ್ತರಿಗೆ ಎಂದಿನಂತೆ ದೇವರ ದರ್ಶನಕ್ಕೆ ಅವಕಾಶ ನೀಡಲಾಗುವುದೆಂದು ತಿಳಿಸಿದರು.

# ಕನಿಷ್ಠ ವೇತನ ಅಂತಿಮ ಅಧಿಸೂಚನೆ ಪ್ರಕಟಿಸಲು ಆಗ್ರಹ

## ಕಾರ್ಮಿಕ ವಿರೋಧಿ ಸಂಹಿತೆ ತಿರಸ್ಕರಿಸಲು ಒತ್ತಾಯಿಸಿ ಸಿಐಟಿಯು ಪ್ರತಿಭಟನೆ

• ಪ್ರಜೋದಯ ವರದಿ

**ಹಾಸನ:** ನೆನೆಗುದಿಗೆ ಬಿದ್ದಿರುವ ಕನಿಷ್ಠ ವೇತನದ ಅಂತಿಮ ಅಧಿಸೂಚನೆಯನ್ನು ಪ್ರಕಟಿಸುವಂತೆ ಹಾಗು ಕಾರ್ಮಿಕ ವಿರೋಧಿ ಸಂಹಿತೆಗಳನ್ನು ತಿರಸ್ಕರಿಸುವಂತೆ ಒತ್ತಾಯಿಸಿ ಸಿಐಟಿಯು ನೇತೃತ್ವದಲ್ಲಿ ನಗರದ ಉಪ ಕಾರ್ಮಿಕ ಆಯುಕ್ತರ ಕಚೇರಿ ಎದುರು ಮಂಗಳವಾರ ಪ್ರತಿಭಟನೆ ನಡೆಯಿತು.



ಈ ವೇಳೆ ಸಿಐಟಿಯು ಜಿಲ್ಲಾಧ್ಯಕ್ಷ ಧರ್ಮೇಶ್ ಅವರು ಮಾತನಾಡಿ, ಏಳು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕನಿಷ್ಠ ವೇತನವನ್ನು ಕೂಡಲೇ ಜಾರಿಗೊಳಿಸಬೇಕು ಹಾಗು ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನಾಲ್ಕು ಸಂಹಿತೆಗಳನ್ನು ಮುಂಬರುವ ವಿಧಾನಸಭಾ ಅಧಿವೇಶನದಲ್ಲಿ ತಿರಸ್ಕರಿಸಿ ನಿರ್ಣಯ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸರ್ಕಾರ ಕನಿಷ್ಠ ವೇತನ ಪ್ರಕಟಣೆಯಲ್ಲಿ ವಿಳಂಬ ಮಾಡುತ್ತಿದೆ. ರಾಜ್ಯದಲ್ಲಿನ ಅನುಸೂಚಿತ ಉದ್ದಿಮೆಗಳ ಕಾರ್ಮಿಕರಿಗಾಗಿ ಏಪ್ರಿಲ್ 2025ರಲ್ಲಿ ಕರಡು ಅಧಿಸೂಚನೆ ಹೊರಡಿಸಲಾಗಿತ್ತು. ಕನಿಷ್ಠ ವೇತನ ಸಲಹಾ ಮಂಡಳಿಯು ಆಗಸ್ಟ್ 2025ರಲ್ಲಿಯೇ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರೂ, ಈವರೆಗೂ ಅಂತಿಮ ಪ್ರಕಟಣೆ ಹೊರಬಿದ್ದಿಲ್ಲವೆಂದು ದೂರಿದರು.

ಕನಿಷ್ಠ ವೇತನ ಪರಿಷ್ಕರಣೆಯಾಗಿ ಏಳು ವರ್ಷಗಳೇ ಕಳೆದಿವೆ. ಹೈಕೋರ್ಟ್ ತೀರ್ಪಿನ ಪ್ರಕಾರ, ನೂತನ ಪ್ರಾಧಿಕಾರಗಳು ರಚನೆಯಾಗುವವರೆಗೆ ಹಳೆಯ ಕಾರ್ಮಿಕ ಇಲಾಖೆಯ ಪ್ರಾಧಿಕಾರಗಳೇ ಮುಂದುವರೆಯಲಿವೆ. ಹೀಗಾಗಿ ಕನಿಷ್ಠ ವೇತನ ಘೋಷಣೆಗೆ ಯಾವುದೇ ಕಾನೂನಿನ ತೊಡಕಿಲ್ಲದಿರುವುದರಿಂದ ಲಕ್ಷಾಂತರ ದುರ್ಬಲ ಕಾರ್ಮಿಕರ ಆರ್ಥಿಕ ಸ್ವಾವಲಂಬನೆಗಾಗಿ ಕೂಡಲೇ ಕನಿಷ್ಠ ವೇತನ ಪ್ರಕಟಿಸಬೇಕೆಂದು ಒತ್ತಾಯಿಸಿದರು.

ಕೇಂದ್ರ ಸರ್ಕಾರ ಅಂಗೀಕರಿಸಿರುವ ನಾಲ್ಕು ಕಾರ್ಮಿಕ ಸಂಹಿತೆಗಳು ಕಾರ್ಮಿಕರು ಒಂದು ಶತಮಾನದ ಹೋರಾಟದಿಂದ ಪಡೆದ ಹಕ್ಕುಗಳನ್ನು ಕಿತ್ತುಕೊಳ್ಳಲಿವೆ. ಕೈಗಾರಿಕಾ ಸಂಬಂಧಗಳ ಸಂಹಿತೆ ಮುಖಾಂತರ ಮುಷ್ಕರ ಅಥವಾ ಒಕ್ಕೂಟ ರಚಿಸಲು ಶೇ.75 ರಷ್ಟು ಕಾರ್ಮಿಕರ ಬೆಂಬಲ ಕಡ್ಡಾಯಗೊಳಿಸುವ ಮೂಲಕ ಕಾರ್ಮಿಕರ ಸಾಂಸ್ಥಿಕವಾಗಿ ಹೋರಾಡುವ ಹಕ್ಕನ್ನು ಕಸಿದುಕೊಳ್ಳ ಲಾಗಿದೆ. 300 ಕಾರ್ಮಿಕರಿರುವ ಉದ್ದಿಮೆಗಳು ಸರ್ಕಾರದ ಅನುಮತಿಯಿಲ್ಲದೆ ಕಾರ್ಮಿಕರನ್ನು ವಜಾಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ಅದರಿಂದ ಕರ್ನಾಟಕದ ಶೇ. 88.5ರಷ್ಟು ಸಣ್ಣ ಮತ್ತು ಮಧ್ಯಮ ಉದ್ಯಮಗಳಲ್ಲಿನ 10-12 ಲಕ್ಷ ಸಂಘಟಿತ ಕಾರ್ಮಿಕರ ಉದ್ಯೋಗ ಭದ್ರತೆ ಅಪಾಯದಲ್ಲಿದೆ ಎಂದು ಆರೋಪಿಸಿದರು.

ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಂ.ಬಿ.ಪುಷ್ಪ ಅವರು ಮಾತನಾಡಿ, ಕಾರ್ಮಿಕ ಸಂಹಿತೆಗಳ ಜಾರಿಯಿಂದ ರಾಜ್ಯದ ಅಂಗನವಾಡಿ, ಬಿಸಿಯೂಟ ಮತ್ತು ಆಶಾ ಕಾರ್ಯಕರ್ತೆಯರು ಉದ್ಯೋಗ ಭದ್ರತೆ ಹಾಗು ಪಿಂಚಣಿ ಸೌಲಭ್ಯವನ್ನು ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಕೇಂದ್ರ ಸರ್ಕಾರವು ಪಿ.ಎಫ್, ಇ.ಎಸ್.ಐ. ಕುರಿತು ಹಸಿ ಸುಳ್ಳುಗಳನ್ನು ಹರಿಬಿಡುತ್ತಿದೆ. ದೇಶದ ಶೇ.93ರಷ್ಟು ಕಾರ್ಮಿಕರಿಗೆ ನೂತನ ಸಂಹಿತೆಗಳಿಂದ ಯಾವುದೇ ಲಾಭವಿಲ್ಲ, ಬದಲಾಗಿ ಇದು ನವ ಜೀತ ಪದ್ಧತಿಯನ್ನು ಜಾರಿಗೊಳಿಸಲಿದೆ ಎಂದು ಹೇಳಿದರು.

ಸಿಐಟಿಯು ಜಿಲ್ಲಾ ಖಜಾಂಚಿ ಅರವಿಂದ, ಕಾರ್ಮಿಕ ಮುಖಂಡರಾದಕೆ.ಟಿ.ಹೊನ್ನೇಗೌಡ, ಮಂಜುಳ, ಪ್ರಕಾಶ, ರಮೇಶ, ಕುಮಾರಸ್ವಾಮಿ, ಚಂದ್ರೇಗೌಡ, ಜಯಂತಿ, ಮೀನಾಕ್ಷಿ ಮತ್ತಿತರರು ಇದ್ದರು.

## ಅಯ್ಯಪ್ಪಸ್ವಾಮಿ ದೇವಸ್ಥಾನದ ರಸ್ತೆ ಅಭಿವೃದ್ಧಿ: ಕೃತಜ್ಞತೆ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಅಯ್ಯಪ್ಪ ಸ್ವಾಮಿ ಚಾರಿಟಬಲ್ ಟ್ರಸ್ಟ್ ವತಿಯಿಂದ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಟ್ರಸ್ಟ್‌ನ ದೇವಿಸ್ವಾಮಿ, ಗುರುಸ್ವಾಮಿ, ದಯಾನಂದ್(ಧನಪಾಲ್) ಜಂಟಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ದೇವಸ್ಥಾನದ ಅಭಿವೃದ್ಧಿ ಕಾರ್ಯಗಳಿಗೆ ಸ್ಥಳೀಯ ಶಾಸಕರಾದ ಹೆಚ್.ಕೆ.ಸುರೇಶ್ ಅವರು ನೀಡುತ್ತಿರುವ ಸಹಕಾರಕ್ಕೆ ಕೃತಜ್ಞತೆ ಸಲ್ಲಿಸಿದರು.




ಕಳೆದ 8 ವರ್ಷಗಳಿಂದ ಅಯ್ಯಪ್ಪ ಸ್ವಾಮಿ ದೇವಸ್ಥಾನ ಕಾರ್ಯನಿರ್ವಹಿಸುತ್ತಿದ್ದು, ಭಕ್ತರ ಸಂಖ್ಯೆಯೂ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ದೇವಸ್ಥಾನಕ್ಕೆ ಆಗಮಿಸುವ ಭಕ್ತರ ಅನುಕೂಲಕ್ಕಾಗಿ ರಸ್ತೆ ಅಭಿವೃದ್ಧಿ ಅವಶ್ಯಕವಾಗಿತ್ತು. ಈ ಕುರಿತು ಹಲವು ಬಾರಿ ಮನವಿ ಸಲ್ಲಿಸಲಾಗಿತ್ತು. ಈ ಹಿಂದೆ ರಸ್ತೆ ಸಂಪೂರ್ಣವಾಗಿ ಗೊಚ್ಚೆ ಕಲ್ಲಿನಿಂದ ಕೂಡಿದ್ದು, ಭಕ್ತರು ಹಾಗೂ ಸ್ಥಳೀಯರಿಗೆ ತೊಂದರೆಯಾಗುತ್ತಿತ್ತು. ರಸ್ತೆ ಡಾಂಬರೀಕರಣದ ಬೇಡಿಕೆ ಇದ್ದರೂ ಅದು ನೆರವೇರಿರಲಿಲ್ಲ. ಈಗ ಶಾಸಕರು ಭರವಸೆ ನೀಡಿದಂತೆ ರಸ್ತೆ ಕಾಮಗಾರಿ ಪೂರ್ಣಗೊಳಿಸಿದ್ದು, ಭಕ್ತರು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗಿದೆ ಎಂದು ತಿಳಿಸಿದರು.

ದೇವಸ್ಥಾನದ ಪಕ್ಕದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ಸಣ್ಣ ಮಟ್ಟಿನ ಕಟ್ಟಡ ವ್ಯವಸ್ಥೆ ಇದ್ದರೂ, ಹೆಚ್ಚಿನ ಭಕ್ತರು ಸೇರುವ ಕಾರ್ಯಕ್ರಮಗಳಿಗೆ ವಿಶಾಲ ಭವನ ಅಗತ್ಯವಿದೆ. ಭವಿಷ್ಯದಲ್ಲಿ ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಕ್ರಮ ನಡೆಸಲು ಸಮುದಾಯ ಭವನ ನಿರ್ಮಾಣದ ಅಗತ್ಯವಿದೆ ಎಂದು ಮನವಿ ಮಾಡಿದರು.

ಟ್ರಸ್ಟ್ ವತಿಯಿಂದ ಹಲವು ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮ ಆಯೋಜಿಸಲಾಗುತ್ತಿದ್ದು, ರಸ್ತೆ ವ್ಯವಸ್ಥೆ ಸುಧಾರಣೆಯಾದ ಹಿನ್ನಲೆಯಲ್ಲಿ ಇನ್ನಷ್ಟು ಭಕ್ತಾಧಿಗಳು ಭಾಗವಹಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಟ್ರಸ್ಟ್‌ನ ಸುಂದರರಾಜ್, ಹರೀಶ್, ನೀಲಕಂಠೇಗೌಡ ಉಪಸ್ಥಿತರಿದ್ದರು.

## ಪಾಲಿಕೆ ಇಂಜಿನೀಯರ್ ಕವಿತಾಗೆ ಕಿರುಕುಳ ಆರೋಪ

» ಮೊದಲನೇ ಪುಟದಿಂದ

ದರೂ ತಮ್ಮ ಕಾರ್ಯಕ್ಷಮತೆಯಲ್ಲಿ ಹಿಂದೆ ಸರಿಯಲಿಲ್ಲ. ಆದರೆ, ಅವರು ಭ್ರಷ್ಟಾಚಾರ ವಿರೋಧಿ ನಿಲುವು ತಾಳಿದ ಕಾರಣಕ್ಕೆಕೆಲ ವಲಯಗಳಿಂದ ವಿರೋಧ ಎದುರಿಸಿದ್ದಾರೆ. ಇದೀಗ ಹಾಸನ ಮಹಾನಗರ ಪಾಲಿಕೆಯಲ್ಲಿ ಹಲವು ಜವಾಬ್ದಾರಿಯನ್ನು ನಿರ್ವಹಿಸುವ ಮೂಲಕ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಿದ್ದಾರೆ. ಆದರೆ, ಅವರನ್ನು ನಿಂದಿಸುವ, ತೇಜೋವಧೆ ಮಾಡುವ ಮೂಲಕ ದೌರ್ಜನ್ಯ ಎಸಗಲಾಗುತ್ತಿದೆ ಎಂದು ದೂರಿದರು.

ಇತ್ತೀಚೆಗೆ ಸಿಸಿ ಕ್ಯಾಮೆರಾ ಅಳವಡಿಕೆ ಸೇರಿ ಕೆಲವು ಆರೋಪ ಹೊರಬಿದ್ದಿವೆ. ಅವನ್ನೇ ಮುಂದಿಟ್ಟು ಅವರ ಮೇಲೆ ವೈಯಕ್ತಿಕ ದ್ವೇಷ ಸಾಧನೆ ಮಾಡಿ ಮಾನಸಿಕವಾಗಿ ಅವರನ್ನು ಕುಗ್ಗಿಸುವ ಕೆಲ ನಡೆಯುತ್ತಿದೆ. ಪ್ರಾಮಾಣಿಕ ಅಧಿಕಾರಿಗೆ ಹೀಗಾದರೆ, ಭ್ರಷ್ಟಾಚಾರವೇ ಮೇಲಾಗಲಿದ್ದು, ಅದಕ್ಕೆ ಅವಕಾಶ ಕೊಡಬಾರದು. ಕವಿತಾ ಅವರು ಸರ್ಕಾರಿ ಸೇವೆಯ ಜೊತೆಗೆ, ಸಮಾಜಮುಖಿ ಸೇವೆಯಲ್ಲೂ ತಮ್ಮನ್ನು ತೊಡಸಿಕೊಂಡಿದ್ದಾರೆ. ಯಾರ ಒತ್ತಡಕ್ಕೂ ಮಣಿಯದೆ ಜನಪರ ಹಾಗು ನ್ಯಾಯಪರವಾದ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಕವಿತಾ ಅವರ ಕಾರ್ಯವೈಖರಿ ಬಗ್ಗೆ ರಾಜಕೀಯದವರೂ ಸೇರಿ ವಿವಿಧ ಕ್ಷೇತ್ರಗಳ ಪ್ರತಿನಿಧಿಗಳು ಮೆಚ್ಚುಗೆಯ ಮಾತುಗಳನ್ನಾಡಿದ್ದಾರೆ ಎಂದರು.

ಕೆಲವರ ದುರುದ್ದೇಶ, ರಾಜಕೀಯ ಕಾರಣಗಳಿಂದ ಇಲಾಖೆಯೊಳಗಿನ ಒಳಜಗಳ ಹಾಗು ಸ್ವಾರ್ಥ ರಾಜಕಾರಣದಿಂದ ಇಂತಹ ವಿವಾದ ಉಂಟಾಗುತ್ತವೆ. ಜಿಲ್ಲಾಧಿಕಾರಿ ಈ ಬಗ್ಗೆ ಸೂಕ್ಷ್ಮವಾಗಿ ಗಮನ ಹರಿಸಿ, ಪರಿಶೀಲಿಸಿ ಸತ್ಯಾಸತ್ಯತೆ ಬಹಿರಂಗಪಡಿಸಬೇಕೆಂದು. ದಕ್ಷ ಮಹಿಳಾ ಅಧಿಕಾರಿಗೆ ನ್ಯಾಯ ಒದಗಿಸುವುದರ ಜೊತೆಗೆ ತಪ್ಪಿತಸ್ಥರು ಯಾರೇ ಆಗಿದ್ದರೂ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಡಾ||ಭಾರತಿ ರಾಜಶೇಖರ್, ಡಾ.ಧನಲಕ್ಷ್ಮಿ, ಕೆ.ಟಿ.ಜಯಶ್ರೀ, ಕಲಾವತಿ ಮಧು ಸೂದನ್, ವಕೀಲರಾದ ಗಿರಿಜಾಂಬಿಕ, ಕಿಶೋರ್ ಇದ್ದರು.



**ಹಾಸನ: ನಗರದ ಎಂ.ಜಿ. ರಸ್ತೆಯ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಕೀರ್ತನಾ (ಬಿ.ಕಾಂ) ಮತ್ತು ವಿದ್ಯಾರ್ಥಿನಿ ಅನುಷಾ (ಎಂ.ಕಾಂ) ಅಖಿಲ ಭಾರತ ಅಂತರ ವಿಶ್ವವಿದ್ಯಾನಿಲಯದ ಗುಡ್ಡಗಾಡು ಓಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಅವರನ್ನು ಪ್ರಾಂಶುಪಾಲರಾದ ಡಾ.ಕೆ.ಜಿ.ಕವಿತಾ, ದೈಹಿಕ ಶಿಕ್ಷಣ ನಿರ್ದೇಶಕ ಜಿ.ಪಿ.ಯೋಗೇಶ್, ಭೋದಕ ಸಿಬ್ಬಂದಿ ಮತ್ತು ಭೋದಕೇತರ ಸಿಬ್ಬಂದಿ ಸನ್ಮಾನಿಸಿ ಅಭಿನಂದಿಸಿದರು.**

## ಪ್ರತ್ಯೇಕ ಅಪಘಾತ: ಇಬ್ಬರ ಸಾವು

• ಪ್ರಜೋದಯ ವರದಿ

**ಹಾಸನ:** ಹಳ್ಳಿಮೈಸೂರು ಹಾಗು ಆಲೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಟ್ರ್ಯಾಕ್ಟರ್ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಹೊಳೆನರಸೀಪುರ ತಾಲ್ಲೂಕು ಸಾಲಿಗ್ರಾಮ-ರಾಮನಾಥಪುರ ರಸ್ತೆಯ ಜಪದಕಟ್ಟೆ ಸಮೀಪ ನಡೆದಿದೆ. ಬಿದರಕ್ಕ ಗ್ರಾಮದ ಬಿ.ಜಿ. ದೇವರಾಜ್ ಮೃತರು. ಸಾಲಿಗ್ರಾಮ ತಾಲ್ಲೂಕು ಹರದನಹಳ್ಳಿಯಲ್ಲಿ ಮೆಡಿಕಲ್ ಶಾಪ್ ಇಟ್ಟುಕೊಂಡಿದ್ದ ಅವರು ಸೋಮವಾರ ಸಂಜೆ ಕೆಲಸ ಮುಗಿಸಿ ಬೈಕ್‌ನಲ್ಲಿ ಮನೆಗೆ ಬರುತ್ತಿದ್ದಾಗ ಹಿಂದಿನಿಂದ ಬಂದ ಟ್ರ್ಯಾಕ್ಟರ್ ಡಿಕ್ಕಿಯಾಗಿದೆ.

ಗಂಭೀರ ಗಾಯಗೊಂಡಿದ್ದ ಅವರು ರಸ್ತೆಯ ಮೇಲೆ ಬಿದ್ದು ಒದ್ದಾಡುತ್ತಿರುವುದನ್ನು ಕಂಡ ಬಿ.ಆರ್.ಚಂದ್ರೇಗೌಡ ಎಂಬುವವರು ಕುಟುಂಬಸ್ಥರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಕುಟುಂಬ ಸ್ಥರು ಬರುವ ವೇಳೆಗೆ ವ್ಯಕ್ತಿ ಮೃತಪಟ್ಟಿದ್ದರು. ಕೊಣನೂರು ಸಮುದಾಯ ಆಸ್ಪತ್ರೆ ಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು. ಹಳ್ಳಿಮೈಸೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ನಿರ್ಲಕ್ಷ್ಯದ ಚಾಲನೆಯಿಂದ ಬೈಕ್ ಮೋರಿಗೆ ಬಿದ್ದು ಸವಾರ ಮೃತಪಟ್ಟಿರುವ ಘಟನೆ ಆಲೂರು ತಾಲ್ಲೂಕಿನ ಕೊಂಗಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಸಂಪತ್ (29) ಮೃತರು. ಭಾನುವಾರ ರಾತ್ರಿ ಕಾಫಿ ತೋಟಕ್ಕೆ ನೀರು ಹಾಯಿಸಲು ಮೋಟಾರ್ ಆನ್ ಮಾಡಿ ಬರುತ್ತೇನೆಂದು ಬೈಕ್‌ನಲ್ಲಿ ತೆರಳಿದ್ದಾಗ ಘಟನೆ ನಡೆದಿದೆ. ಗ್ರಾಮದ ಧರ್ಮಣ್ಣ ಎಂಬುವವರ ಮನೆ ಮುಂದಿನ ಮೋರಿಗೆ ಬಿದ್ದಿದ್ದರಿಂದ ತೀವ್ರ ಸ್ವರೂಪದ ಗಾಯ ಗಳಾಗಿದ್ದವು. ಚಿಕಿತ್ಸೆಗಾಗಿ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಿದರೂ ಫಲಪ್ರದವಾಗಿಲ್ಲ. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ | ಕ್ರೀಡಾ ಸಾಧಕರಿಗೆ ಸನ್ಮಾನ

# ಸಮಾಜದ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ ಅನನ್ಯ

**ಪ್ರಜೋದಯ ವರದಿ**

**ಅರಕಲಗೂಡು:** ಸಮಾಜದ ಸರ್ವತೋಮುಖ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ ಅನನ್ಯ ಎಂದು ಹಾಸನ ಮಹಾನಗರ ಪಾಲಿಕೆ ಇಂಜಿನೀಯರ್ ಕೆ. ಆರ್.ಕವಿತಾ ಅವರು ಸಲಹೆ ನೀಡಿದರು.



ಪಟ್ಟಣದ ಚನ್ನಬಸವೇಶ್ವರ ಸಮುದಾಯ ಭವನದಲ್ಲಿ ಸ್ವಸ್ಥ ಸಮಾಜ ನಿರ್ಮಾಣ ಸಮಿತಿ ವತಿಯಿಂದ ಅಂತರ ರಾಷ್ಟ್ರಿಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಸಂಭ್ರಮ, ಶ್ರಮಿಕರಿಗೆ ಗೌರವಾರ್ಪಣೆ, ಆರೋಗ್ಯ ಮತ್ತು ಉಚಿತ ಕಣ್ಣು ತಪಾಸಣೆ ಹಾಗೂ ಕ್ರೀಡಾ ಸಾಧಕರಿಗೆ ಮಂಗಳವಾರ ಹಮ್ಮಿಕೊಂಡಿದ್ದ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಎಲ್ಲರೂ ವ್ಯಕ್ತಿತ್ವಕ್ಕೆ ಬೆಲೆಕೊಟ್ಟು ವೃತ್ತಿಯನ್ನು ಗೌರವಿಸಬೇಕು. ಮನಸ್ಸಿಟ್ಟು ಮಾಡುವ ಸತ್ಕಾರ್ಯಗಳಿಗೆಯಶಸ್ಸು ಸಿಗಲಿದೆ. ಮುಪ್ಪಿನಲ್ಲಿರುವ ಹಿರಿಯರ ಸೇವೆ ಮಾಡಿ ಅಸಹಾಯಕರಿಗೆ ಸಹಾಯ ಹಸ್ತ ಚಾಚಿದರೆ ದೇವರ ಸೇವೆ ಕೈಗೊಂಡಷ್ಟು ಪುಣ್ಯ ಪ್ರಾಪ್ತಿಯಾಗಲಿದೆ ಎಂದರು.

ಎಲ್ಲರ ಬದುಕಿನಲ್ಲೂ ಸಂಘರ್ಷಗಳಿರುತ್ತವೆ. ಹಾಗಾಗಿ ಬೇರೆಯವರನ್ನು ಅನುಕರಣೆ ಮಾಡುವುದು ಸರಿಯಲ್ಲ, ಮನುಷ್ಯ ಎಷ್ಟೇ ಹಣ ಸಂಪಾದಿಸಿದರೂ ಆರೋಗ್ಯ ಭಾಗ್ಯವೇ ಮುಖ್ಯ ಎಂಬುದನ್ನು ಮನಗಂಡು ಸಮಿತಿಯವರು ಉಚಿತ ಆರೋಗ್ಯ ಶಿಬಿರ ನಡೆಸಿ ಅಸಹಾ ಯಕರಿಗೆ ನೆರವಾಗುತ್ತಿದ್ದಾರೆ. ಸಮಾಜಮುಖಿ ಕಾರ್ಯಗಳ ಜೊತೆಗೆ ಮರ ಗಿಡಗಳನ್ನು ಬೆಳೆಸಿ ಪರಿಸರಕ್ಕೆ ಕೊಡುಗೆ ನೀಡುತ್ತಿರುವುದು ಪ್ರಶಂಸನೀಯ ಎಂದು ಹೇಳಿದರು.

ಸಮಿತಿ ಅಧ್ಯಕ್ಷ ಪ್ರದೀಪ್ ರಾಮಸ್ವಾಮಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಮಹಿಳಾ ಶಕ್ತಿ ಪ್ರಬಲವಾಗಿದ್ದು ಅವರನ್ನು ಗೌರವಿಸುವ ಸಮಾಜ ಉನ್ನತಿ ಕಾಣುತ್ತದೆ. ಪುರುಷರು ಗಂಡು ಎನ್ನುವ ಅಹಂ ತೊರೆದು ಮಹಿಳೆಯರ ಸಾಧನೆಗೆ ಬೆನ್ನೆಲುಬಾಗಿ ನಿಲ್ಲಬೇಕು. ಸ್ತ್ರೀ ಸ್ವಾತಂತ್ರ್ಯ ಮತ್ತು ಸಮಾನತೆಗೆ ಪ್ರಧಾನ್ಯತೆ ನೀಡಬೇಕೆಂದರು.

ತಾಲ್ಲೂಕು ಆರೋಗ್ಯಾಧಿಕಾರಿ ಡಾ|| ಪುಷ್ಪಲತಾ ಅವರು ಮಾತನಾಡಿ, ಸಮಾಜದಲ್ಲಿ ಮಹಿಳೆಯರು ಎಷ್ಟು ಸುರಕ್ಷಿತ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಅನಾದಿ ಕಾಲದಿಂದಲೂ ಮಾನವ ಕಳ್ಳಸಾಗಾಣಿಕೆಯಂತ ದೌರ್ಜನ್ಯಗಳನ್ನು ಮಹಿಳೆಯರು ಎದುರಿಸುತ್ತಿದ್ದಾರೆ. ಅದಕ್ಕಾಗಿ ಮಹಿಳೆಯರು ಸ್ವಾವಲಂಬಿಗಳಾಗಬೇಕೆಂದು ತಿಳಿಸಿದರು.

ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕಿ ಕೆ.ಜೆ.ಕವಿತಾ ಅವರು ಮಾತನಾಡಿ, ಪ್ರತಿ ಕ್ಷೇತ್ರಗಳ ಏಳಿಗೆಯಲ್ಲಿ ಮಹಿಳೆಯರ ಪಾತ್ರ ಇದೆ. ಸಮಾಜದಲ್ಲಿ ಮಹಿಳಾ ಶಕ್ತಿಗೆ ತಕ್ಕ ಗೌರವ ಸಿಗಬೇಕಾಗಿದೆ ಎಂದರು.

ಆರೋಗ್ಯ ಇಲಾಖೆ ಸಿಬ್ಬಂದಿಗೆ ಮೆಡಿಕಲ್ ಕಿಟ್ ವಿತರಿಸಲಾಯಿತು. ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹಿಳೆಯರು ಹಾಗೂ ಕ್ರೀಡಾ ಸಾಧಕರನ್ನು ಸನ್ಮಾನಿಸಲಾಯಿತು. ಪೌರ ಕಾರ್ಮಿಕರಿಗೆ ಜರ್ಕಿನ್, ಟೋಪಿ ವಿತರಿಸಿ ಗೌರವಿಸಲಾಯಿತು.

ಜಿಲ್ಲಾ ಪಂಚಾಯಿತಿ ಸಹಾಯಕ ಕಾಯಪಾಲಕ ಇಂಜಿನೀಯರ್ ಧನಲಕ್ಷ್ಮೀ, ವಕೀಲ ಶಂಕರಯ್ಯ, ನಿವೃತ್ತ ಪ್ರಾಂಶುಪಾಲ ಬಸವರಾಜು, ಉಪನ್ಯಾಸಕ ದಶರಥ, ಮುಖಂಡರಾದ ಪಾಂಡುರಂಗ, ಮೋಹನ್, ವೆಂಕಟೇಶ್, ಕೃಷ್ಣೇಗೌಡ ಇತರರಿದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK